೪೧೮

ಕುಮಾರವ್ಯಾಸ ಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ

ಡಾ. ಬಿ. ಸಿ. ಜವಳಿ

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಮೇ, ೧೯೯೧

ಉಪನ್ಯಾಸ ಗ್ರಂಥಮಾಲೆ

೪೧೮

ಕುಮಾರವ್ಯಾಸ ಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ

(ಒಂದು ತೌಲನಿಕ ಅಧ್ಯಯನ)

ಡಾ. ಬಿ. ಸಿ. ಜವಳಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮೇ, ೧೯೯೧

ಪ್ರಕಾಶಕರು :

ಡಾ. ರು. ಮ. ಷಡಕ್ಷರಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಮೇ. ೧೯೬೧

ಬೆಲೆ : ರೂ. ೧-೦೦

ಮುದ್ರಕರು :

ಜಿ. ಬಿ. ಮನ್ವಾಚಾರ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನೀರಿಕ್ಷೆಗೆ ಮೀರಿದ ಮೆಚ್ಚಿಕೆಯೂ ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೪೧೭ ಪುಸ್ತಿಕೆಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಿಕೆಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಎಸ್. ರಾಮೇಗೌಡ
ಕುಲಪತಿಗಳು

ಅರಿಕೆ

ವಿಶ್ವವಿದ್ಯಾಲಯದ ಪ್ರಸಾರಾಂಗವು ಉತ್ತರ ಕನ್ನಡ ಜಿಲ್ಲೆಯ ಸರಕುಳಿ ಗ್ರಾಮದಲ್ಲಿ ದಿನಾಂಕ ೧೨ ಮತ್ತು ೧೩ ಮಾರ್ಚ ೧೯೮೫ ರಂದು ಏರ್ಪಡಿಸಿದ ೩೪೧ನೇ ವ್ಯಾಸಂಗ ವಿಸ್ತರಣಾ ಉಪನ್ಯಾಸ ಮಾಲಿಕೆಯಲ್ಲಿ ನಾನು "ಕುಮಾರವ್ಯಾಸ ಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ" ಎಂಬ ವಿಷಯದ ಕುರಿತು ಮಾಡಿದ ಲಿಖಿತರೂಪವೇ ಈ ಕಿರುಹೊತ್ತಿಗೆ. ಆ ದಿನ ಗ್ರಾಮದವರು ಬಹಳ ಆಸಕ್ತಿಯಿಂದ ನನ್ನ ಉಪನ್ಯಾಸವನ್ನು ಚಿತ್ತಗೊಟ್ಟು ಲಾಲಿಸಿ, ನನಗೆ ಬರೆಯಲು ಪ್ರೇರಣೆ ನೀಡಿದರು. ಅದರ ಫಲವಾಗಿ ಇಂದು ಈ ಕೃತಿ ಪ್ರಕಟವಾಗುತ್ತಿದೆ. ಇದರ ಪ್ರಕಟನೆಗೆ ನೆರವಾದ ಎಲ್ಲರಿಗೂ ನಾನು ಉಪಕೃತ, ವಿಶೇಷವಾಗಿ ಶ್ರೀ ಎಸ್. ಬಿ. ನಾಯಕ ಅವರಿಗೆ ಉಪಕೃತನಾಗಿದ್ದೇನೆ. ಸಾರ್ವಜನಿಕರು, ವಿದ್ಯಾರ್ಥಿಗಳು ಈ ಕೃತಿಯನ್ನು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಂಬಿದ್ದೇನೆ.

ಧಾರವಾಡ
೯-೪-೧೯೯೧

ಬಿ. ಶಿ. ಜವಳಿ

ಪರಿವಿಡಿ

೧. ಪ್ರಾಸ್ತಾವಿಕ

ಕುಮಾರವ್ಯಾಸ, ಕನ್ನಡದ ಶ್ರೇಷ್ಠತಮ ಕವಿಗಳಲ್ಲೊಬ್ಬ. ಭಾಗವತ ಸಂಪ್ರದಾಯವನ್ನು ಎತ್ತಿಹಿಡಿದ ಸಂತಕವಿ; ಭಕ್ತ ಕವಿ:. ಭಕ್ತಾಗ್ರೇಸರ. ಆತನಿಗೆ ಭಾರತ, ಕೃಷ್ಣಕಥೆ. ಅದು ಶ್ರವಣ–ಸುಧಾ ವಿನೂತನ ಕಥನ; ಹಲವು ಜನ್ಮದ ಪಾಪರಾಶಿಯ ತೊಳೆವ ಜಲ. ಚಾರುಕವಿತೆಯ ಬಳಕೆಯಲ್ಲ, ಪಂಚಮಶ್ರುತಿ. ಇದು 'ಪದುಮ ನಾಭನ ಮಹಿಮೆಯನ್ನು ತಿಳಿಸುವ ಧಾರ್ಮಿಕ ಕೃತಿ. ವೀರ ನಾರಾಯಣನೇ ಕವಿಯೆಂದೂ ತಾನು ಲಿಪಿಕಾರನೆಂದೂ, ಕವಿ ಕುಮಾರವ್ಯಾಸ ಹೇಳಿಕೊಂಡಿದ್ದಾನೆ. ಪಂಪಕವಿಯ ದೃಷ್ಟಿಯಲ್ಲಿ ಭಾರತ 'ಲೌಕಿಕ ಕಾವ್ಯ . ಕುಮಾರವ್ಯಾಸ ಇದನ್ನು ಭಕ್ತಿಯ ಕಾವ್ಯ ವನ್ನಾಗಿ ಬರೆದಿದ್ದರೂ, ಅದನ್ನು ಕೇವಲ ಭಕ್ತಿಯ ಕಾವ್ಯವೆನ್ನದೆ, 'ಲೌಕಿಕ' ಮತ್ತು 'ಪಾರಲೌಕಿಕ ಕಾವ್ಯ' ಎಂದು ಕರೆಯಬೇಕೆನ್ನಿಸುತ್ತದೆ. ಬದುಕನ್ನು ಕೇವಲ ಈ ರೀತಿ 'ಲೌಕಿಕ –'ಪಾರಮಾರ್ಥಿಕ' ಎಂದು ವಿಂಗಡಿಸುವುದು ಅಷ್ಟೊಂದು ಸಮಂಜಸವಲ್ಲ. ಒಂದನ್ನು ಬಿಟ್ಟು ಇನ್ನೊಂದು ಇರುವುದು ಸಾಧ್ಯವಿರುವುದಾದರೂ ಎರಡನ್ನೂ ಕೂಡಿ ನಡೆವುದೇ ಮೇಲಾದುದು. ನಿಜಗುಣಶಿವಯೋಗಿಗಳು ಆ ಕಾರಣದಿಂದಲೇ "ಜಾಣನು ಲೌಕಿಕವನು ಪಾರಮಾರ್ಥವನು ಮಾಣದೆ ಕೂಡಿ ನಡೆಸುತಿಹನು" ಎಂದು ನುಡಿದಿದ್ದಾನೆ. ಶಿವ ಶರಣರು ಅಂತಹದೇ ಬದುಕಿನ ನಿಲವನ್ನು ಪ್ರತಿಪಾದಿಸಿದ್ದಾರೆ.

ವಚನಕಾರರ ಅನಂತರ ಬಂದ ಕುಮಾರವ್ಯಾಸ, ಈ ಧೋರಣೆಯನ್ನೇ ಪ್ರತಿಪಾದಿಸಿದ್ದಾನೆ. ಮೂಲವ್ಯಾಸಭಾರತದಲ್ಲಿಯೂ ಈ ಲೌಕಿಕ ಮತ್ತು ಪಾರಮಾರ್ಥಿಕ ದೃಷ್ಟಿ ಪ್ರತಿಪಾದಿತವಾಗಿದೆ. ಮೂಲಮಹಾಭಾರತದಲ್ಲಿಯೇ ಉಕ್ತವಾದ ಶಿವಭಕ್ತಿಯನ್ನು ಕುಮಾರವ್ಯಾಸನು ಭಾರತದಲ್ಲಿ ಪ್ರತಿಪಾದಿಸಿದ್ದಾನೆ. ಭಾರತವು ಸರ್ವರಸಪ್ರತಿಪಾದಕವೂ ಸ್ವಾರಸ್ಯಕರವೂ ಕಲಾತ್ಮಕವೂ ಆದ ಕಥೆಯಾಗಿರುವುದರಿಂದ ಸರ್ವಜನಾದರಣೀಯವಾಗಿದೆ. ಕ್ಷಾತ್ರ, ವೇದದಸಾರ, ಮಂತ್ರಿಜನಕ್ಕೆ ಬುದ್ಧಿಗುಣ, ಶೃಂಗಾರ, ಪಾಂಡಿತ್ಯ– ಈ ಮೊದಲಾದ ಮೌಲ್ಯಗಳೆಲ್ಲವೂ ಇಲ್ಲಿ ಪ್ರತಿಪಾದಿತವಾಗಿವೆ; ಯೋಗಶಾಸ್ತ್ರವೂ ಇಲ್ಲಿ ಉಕ್ತವಾಗಿದೆ, ಮಹಾಭಾರತ, ರಾಜಕೀಯವನ್ನು ತಿಳಿವವರಿಗೆ ಒಂದು ಆಕರವಾಗಿದೆಯಷ್ಟೇ ಅಲ್ಲ, ಅತ್ಯಂತ ಮೇಲಾದ ರಾಜಕೀಯ ವ್ಯವಹಾರವನ್ನು ತಿಳಿಯಬಯಸುವವರಿಗೂ ಇದೊಂದು ಸಹಾಯಕ ಶ್ರೇಷ್ಠಕಾವ್ಯ. ಕುಮಾರವ್ಯಾಸ ಹಾಡಿದರೆ ದ್ವಾಪರಯುಗದ ಮಹಾವ್ಯಕ್ತಿಗಳು ಕಣ್ಮುಂದೆ ನಿಲ್ಲುತ್ತಾರೆ. ಆ ಯುಗದ ಮೌಲ್ಯಗಳೇ ಹೊಳೆಯುತ್ತವೆ; ಮಹಾಭಾರತದ ಚಿತ್ರವೆಲ್ಲ ಕಣ್ಮುಂದೆ ಬರುತ್ತದೆ: ಮೈಯಲ್ಲಿ ಮಿಂಚಿನ ಸಂಚಾರವಾಗುತ್ತದೆಯೆಂಬ ಮಹಾಕವಿ ಕುವೆಂಪುವಾಣಿಯ ಅನುಭವ ಗಮ್ಯವಾಗುತ್ತದೆ: ಓದುಗರಿಗೆ ರೋಮಾಂಚಕ ಅನುಭವವಾಗುತ್ತದೆ. ಕುಮಾರವ್ಯಾಸನ ಭಾಷೆ, ಉತ್ತರಕರ್ನಾಟಕದ ವಿಶಿಷ್ಟ ಶೈಲಿಯುಳ್ಳ, ದೇಶಿಯ ಜಿಡಗಿನಿಂದ ಕೂಡಿದೆ. ಅದು ಅರ್ಥಪೂರ್ಣವೂ ಸಂಪತ್‌ಭರಿತವೂ ಆದುದು. ಆತನು ಮಹಾಭಾರತದಂತಹ ಬೃಹತ್‌ಕಾವ್ಯವನ್ನು ಕನ್ನಡಕ್ಕೆ ಭಾಷಾಂತರ ಮಾಡುವ ಕಾರ್ಯಕ್ಕೆ

ಕೈಹಾಕಿದುದೇ ಒಂದು ಅದ್ಭುತ. ಕನ್ನಡದ ವಾಗ್ದೇವಿಯ ಭಂಡಾರಕ್ಕೆ ತನ್ನ ಹೊಸ ಹೊಸ ಪದಪ್ರಯೋಗಗಳ ಮೂಲಕ, ಅಪಾರ ಕಾಣಿಕೆ ಸಲ್ಲಿಸಿ ತನ್ನ ಮಾತೃ ಋಣ ತೀರಿಸಿದ್ದಾನೆ. ಅವನೊಬ್ಬ ಭಾಷಾಸಿರಿವಂತ. ಭಾವಪೂರ್ಣ ಭಾಷೆಯೊಂದಿಗೆ. ಭಾಮಿನೀ ಷಟ್ಪದಿಗಳ ಝೇಂಕಾರಕ್ಕೆ ಓದುಗನು ಮಣಿಯದಿರನು. ಈ ಕನ್ನಡ ಭಾರತದ ಕೃಷ್ಣಭಕ್ತಿ, ಅತ್ಯಂತ ಮನಮೋಹಕವಾದುದು. ಕುಮಾರ ವ್ಯಾಸಭಾರತದಲ್ಲಿ ಕೃಷ್ಣನು, ಭಕ್ತರಿಗೆ ದೇವನೂ, ಸೂತ್ರಧಾರಿಯೂ ಪ್ರೇರಕನೂ, ಅತಿಶಕ್ತಿಯುತನೂ, ಪವಾಡಪುರುಷನೂ, ದೇವಾಧಿದೇವನೂ ಆಗಿ ಕಂಗೊಳಿಸಿದರೆ, ಭಕ್ತರಲ್ಲದವರಿಗೆ ಅವನೊಬ್ಬ ಪಾತ್ರಧಾರಿಯೂ,ಪ್ರಧಾನಪುರುಷನೂ,'ಕೈತವದ—ಶಿಕ್ಷಾಗುರುವೂ' ರಾಜಕೀಯ ಧುರಂಧರನೂ, ರಾಜಕಾರಣಪಟುವೂ, ಮಹಾಯೋಧನೂ ಆಗಿ ಕಂಗೊಳಿಸುತ್ತಾನೆ. ಅವನ ದೇವತ್ವವನ್ನು ಒಪ್ಪುವವರು ಒಪ್ಪಲಿ; ಆದರೆ ಅವನ ಅತುಲಬಲಪರಾಕ್ರಮ. ಅಗಾಧರಾಜಕೀಯ ಕೈಚಳಕ, ಅನುಪಮ ವ್ಯವಹಾರಜ್ಞಾನ, ಪಾಂಡವರ (ಸತ್ಯದ) ಮೇಲಿನ ಪಕ್ಷಪಾತ, ನಂಬಿದವರನ್ನು ಪಂಚಿಸದ ಪ್ರಾಮಾಣಿಕತನ, ಗುರು—ಹಿರಿಯರಿಗೆ ತೋರುತ್ತಿದ್ದ ಭಕ್ತಿಭಾವ, ವಿಧೇಯತೆ, ದುಷ್ಟರನ್ನು ಸದೆಬಡಿವಲ್ಲಿ ತೋರಿದ ಜಾಣ್ಮೆ— ಈ ಎಲ್ಲ ಲೌಕಿಕ ಗುಣಗಳಿಂದಾಗಿ ಅವನು ಎಲ್ಲರಿಗೂ ವಂದನೀಯನಾಗಿದ್ದಾನೆ; ಪೂಜ್ಯನೆನಿಸಿದ್ದಾನೆ; ದೇವತ್ವದ ಸ್ಥಾನವನ್ನು ಹೊಂದಿದ್ದಾನೆ. ಆದುದರಿಂದ ಆತನನ್ನು 'ದುಷ್ಟನಿಗ್ರಹ ಶಿಷ್ಟಪರಿಪಾಲಕ', 'ದಾನವಧ್ವಂಸಿ' 'ಭಕ್ತವತ್ಸಲ' ಎಂದು ಕರೆದಿರುವುದು ಸಾರ್ಥಕವಾಗಿದೆ. ಅಂತಹ ಮೇಧಾವಿ, ರಾಜ್ಯಶಾಸ್ತ್ರ ಬಲ್ಲಿದ. ಈ ದೇಶದಲ್ಲಿ

ಮತ್ತೊಬ್ಬನು ಜನಿಸಿದ್ದಾನೋ ಇಲ್ಲವೋ ಹೇಳುವುದು ದುಸ್ತರ! ಅವನ ಎಲ್ಲ ಶಕ್ತಿಗಳನ್ನು ಪಡೆದಂದು. ಆತನನ್ನು ವಿಷ್ಣುವಿನ ಅವತಾರ ಎಂದು ಭಾರತೀಯರು ಭಾವಿಸಿದಂತಿದೆ. ಇಳೆಯ ಜಾಣರು ಮೆಚ್ಚುವಂತಿರೆ, ತಿಳಿಯ ಹೇಳುವೆ ಕೃಷ್ಣಕಥೆಯನು ಎಂದು ಕುಮಾರವ್ಯಾಸನೇ ಹೇಳಿಕೊಂಡಿದ್ದಾನೆ. ಭಕ್ತರಿಗೆ ದೇವನಾಗಿ, ಜೀವಾತ್ಮರಿಗೆ ಪರಮಾತ್ಮನಾಗಿ ಕಂಗೊಳಿಸಿದ ಶ್ರೀಕೃಷ್ಣನು, ಜನ ಸಾಮಾನ್ಯರಲ್ಲಿ ಮೂಡಿಸಿದ ಭಕ್ತಿಭಾವಕ್ಕೆ 'ಕೃಷ್ಣಪಾರಿಜಾತ', 'ಶ್ರೀಕೃಷ್ಣ ಸಂಧಾನ' ದಂತಹ ಜಾನಪದ ಕೃತಿಗಳೇ ಸಾಕ್ಷಿ. ವಿಶೇಷವಾಗಿ, ಕುಮಾರವ್ಯಾಸಕವಿಯ ಪ್ರಭಾವ 'ಶ್ರೀಕೃಷ್ಣಸಂಧಾನ' ಎಂಬ ಯಕ್ಷಗಾನದ ಮೇಲೆ ಆಗಿರುವುದನ್ನು ಓದುಗರು ಗಮನಿಸದಿರರು.* ಮಹಾಭಾರತದಲ್ಲಿ 'ಶ್ರೀಕೃಷ್ಣಸಂಧಾನದ'ಕಥಾಭಾಗವು ರಾಜಕೀಯ ವ್ಯವಹಾರಕ್ಕೆ ಸಂಬಂಧಿಸಿರುವುದರಿಂದ, ಈ ಸನ್ನಿವೇಶದಲ್ಲಿ ಆತನ ರಾಜಕೀಯ ಜಾಣ್ಮೆಯ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗುತ್ತದೆ. ಕುಮಾರವ್ಯಾಸನು ಹೇಳುವಂತೆ ಅವನು ಮಾನವನಲ್ಲ'ಆದಿಪುರುಷ', ಆದಿಪುರುಷನಾದರೂ 'ಮಾನವದೇಹಿ' ಯಾಗಿ ಮತ್ತೆ ಜನಿಸಿದುದರಿಂದ ಮಾನವರಂತೆ ನಡೆದೂ, ಮಾನವನಲ್ಲವೆಂಬುದನ್ನು ಭೂಮಿಗೆ ತೋರಿಸಲು ಮಾನವಾತೀತ ಗುಣಗಳನ್ನೂ, ಶಕ್ತಿಯನ್ನೂ ಪ್ರಕಟಿಸಿದ್ದಾನೆ.

---

* ನೋಡಿರಿ ಶ್ರೀಕೃಷ್ಣಸಂಧಾನ (ಕನ್ನಡ ಬಯಲಾಟ), ಸಂಪಾದಕರು: ಡಾ. ಎಂ. ಎಸ್. ಸುಂಕಾಪುರ (ಕನ್ನಡ ಅಧ್ಯಯನಪೀಠ, ಕ. ವಿ. ವಿ. ಪ್ರಕಟನೆ-೧೯೭೮) ಇದರ ಪುಟ ೨ರಲ್ಲಿ 'ಉದ್ಯೋಗ ಪರ್ವ'ದ ಕಥೆಯೇ ಇದಕ್ಕೆ ಆಧಾರವೆಂದು ತಿಳಿಸಿ, ಇದು 'ಯಕ್ಷಗಾನ' ಎಂದು ತಿಳಿಸಲಾಗಿದೆ. ಅಲ್ಲದೆ ಈ ಭಾಗದಲ್ಲಿ ಮುಖ್ಯವಾದುದು ಶ್ರೀಹರಿ, 'ವಿಶ್ವರೂಪದರ್ಶನ' ತೋರಿದುದು. ಇದು 'ಪುಣ್ಯಚರಿತೆ' ಎಂದೂ ತಿಳಿಸಲಾಗಿದೆ,

೨. ಕೃಷ್ಣ ಸಂಧಾನದ ಕಥಾವಸ್ತು

ಈ ಭಾಗ ಬರುವುದು ಮಹಾಭಾರತದ ಉದ್ಯೋಗ ಪರ್ವದಲ್ಲಿ. 'ಉದ್ಯೋಗ' ಎಂದರೆ 'ಯುದ್ಧಕ್ಕಾಗಿ ಸೇನೆಯ ಸಂಗ್ರಹಕಾರ್ಯ' ಎಂದು ಅರ್ಥಮಾಡಲಾಗಿದೆ. ಪಾಂಡವರು ದ್ಯೂತದಲ್ಲಿ ಸೋತು, ದುರ್ಯೋಧನನಿಗೆ ತಮ್ಮ ರಾಜ್ಯವನ್ನು ಒಪ್ಪಿಸಿ, ವನವಾಸವನ್ನು ಮುಗಿಸಿ, 'ಅಜ್ಞಾತವಾಸ'ವನ್ನು ವಿರಾಟನ ಅರಮನೆಯಲ್ಲಿ ಕಳೆಯುತ್ತಿರುವಾಗಲೇ, ಕೀಚಕ ಭೀಮನಿಂದಲೇ ಹತನಾದನು. ಕೀಚಕನು ಸಾಯಬೇಕಾದರೆ ಸಮಬಲನಾದ ಭೀಮನಿಂದಲೇ ಹತನಾಗಿರಬೇಕೆಂಬುದನ್ನು ತಿಳಿದು, ವಿರಾಟನಗರಕ್ಕೆ ದುರ್ಯೋಧನನು ಮುತ್ತಿಗೆಹಾಕಿ ಗೋಗ್ರಹಣ ನಡೆಸಿದ ಕಾಲದಲ್ಲಿ ಪತ್ತುದಿನಗಳವರೆಗೆ ಒಂದು ಚಿಕ್ಕ ಕುರುಕ್ಷೇತ್ರವೇ ನಡೆದಂತಾಗಿ, ಆದರಲ್ಲಿ 'ವಿಜಯ' (ಅರ್ಜುನ)ನ ಸಾಹಸದಿಂದ ಕೌರವರು ಸೋತು ಹಸ್ತಿನಾಪತ್ತಿಗೆ ಪಲಾಯನ ಮಾಡುತ್ತಾರೆ! ವಿರಾಟನಿಗೆ ಪಾಂಡವರಿಂದ ಒದಗಿದ ವಿಜಯಕ್ಕಾಗಿ, ಅಭಿಮನ್ಯುವಿಗೆ ಉತ್ತರೆಯನ್ನು ಕೊಟ್ಟು ಮದುವೆ ಮಾಡುತ್ತಾನೆ. ಆ ಮದುವೆಗೆ ಕೃಷ್ಣನೇ ಮೊದಲ್ಗೊಂಡು ಪಾಂಡವರ ಹಿತೈಷಿಗಳೆಲ್ಲ ಆಗಮಿಸಿರುತ್ತಾರೆ. ವಿರಾಟನು ಪಾಂಡವರಿಗೆ , 'ಉಪಪ್ಲಾವ್ಯ' ನಗರವನ್ನು ಕೊಟ್ಟಿರುತ್ತಾನೆ; ಅವರು ಅಲ್ಲಿಯೇ ವಾಸವಾಗಿರುತ್ತಾರೆ; ಅವರ ಅಜ್ಞಾತವಾಸದ ಅವಧಿಯೂ ಮುಗಿದಿರುತ್ತದೆ. ಶ್ರೀ ಕೃಷ್ಣನಾದರೊ,

ಪಾಂಡವರ ಪಕ್ಷಪಾತಿಯಾದುದರಿಂದ, ಅವರ ಮನೆಯವನಾಗಿಯೇ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದನು. ಪಾಂಡವರೂ ಕೃಷ್ಣ ನನ್ನು ಅತ್ಯಂತ ಗೌರವದಿಂದ ಕಾಣುತ್ತಿದ್ದರು. ಮದುವೆಯ ಎಲ್ಲ ಕಾರ್ಯಗಳೂ ಸಾಂಗವಾಗಿ ನೆರವೇರಿದಮೇಲೆ, ಒಂದುದಿವಸ ಒಡ್ಡೋಲಗದಲ್ಲಿ ಮುರವೈರಿಯೇ ರಾಜಕಾರ್ಯದ ಮಾತುಗಳ ಪ್ರಸ್ತಾಪಮಾಡಿ, ಪಾಂಡವರ ಭವಿಷ್ಯಜೀವನದ ಬಗೆಗೆ ಚಿಂತಿಸುತ್ತಾ;

> "ಒಂದೆ ಜೂಜಿನ ಪಿಲಗದಲಿ ಮನಸೊಂದರಡವಿ
> ಯಲಿ;
> ಧರೆಗೆ ಇನ್ನೆಂದು ಸೇರುವರು ?
> ಈ ಪಾಂಡವರಿಗೆ ಏನು ಪದನು? –ಎಂದು ನುಡಿ
> ಯುತ್ತಾನೆ.

ಆಗ ದ್ರುಪದರಾಜನು : "ದೇವ, ನೀನೆ ಬಲ್ಲೆ ನಿನ್ನಯ ಭಾವವನು; ಧರ್ಮಜನ ಬಹುಮಾನಾಪಮಾನದ ಹೊಣೆಗೆ ನಿನ್ನದು; ಕಾಲ ಲೊದೆದುದನೋಪಿ ತಲೆಯಲಿ ಹೊತ್ತು ನಡೆಸುವೊಡಾವು ಬಲ್ಲೆವು" ಎಂದು ವಿನಯಪೂರ್ವಕ ನುಡಿಯಲು, ಶ್ರೀಕೃಷ್ಣನು ಪಾಂಡವರ ಭೂಮಿಯನ್ನು ಬೇಡಲು "ಶಿಷ್ಟರನು ಕಳುಹುವುದು ಭೀಷ್ಮಾದಿಗಳ ಬಳಿಗೆ ; 'ವಿನಯದಲಿ ಸಾಮವ ಬಳಸುವುದು; ತಿಳಿವುದಾತನ ಮತವ; ಅಲ್ಲಿಂ ಬಳಿಕ ನಯವಿಲ್ಲೆಂದಡೆ ಆಹವದೊಳಗೆ ಕೈದೋಱು ವುದು ಮತ –ಎಂದು ನುಡಿಯುತ್ತಾನೆ. ಸಾಮೋಪಾಯದಿಂದ ದುರ್ಯೋಧನನನ್ನು ಮನವೊಲಿಸಿ ರಾಜ್ಯ ಬೇಡಿಪಡೆವುದು; ಅವಕ್ಕೊಪ್ಪದಿದ್ದರೆ 'ದಂಡೋಪಾಯ' ವನ್ನು ಬಳಸುವುದು ಎಂದೂ ಸೂಚಿಸುತ್ತಾನೆ. ಆಗ ಬಲರಾಮನು "ಎಲೆ ಮರುಳೆ ಮುರವೈರಿ,

ಯುಧಿಷ್ಠಿರನು ಜೂಜಿನಲ್ಲಿ ರಾಜ್ಯವನ್ನು ಸೋತಿದ್ದಾನೆ". ಅದನ್ನವನು ಜೂಜಿನಲ್ಲಿ ಗೆಲ್ಲಲಿ, ಇಲ್ಲವಾದರೆ ಯುದ್ಧದಲ್ಲಿ ಗೆಲ್ಲಲಿ; ಸುಯೋಧನನಲ್ಲಿ ತಪ್ಪಿಲ್ಲ" ಎಂದು ವಾದಿಸುತ್ತಾನೆ. ಆಗ ಕೃಷ್ಣನ ಸಾರಥಿ ಸಾತ್ಯಕಿಯು "ಎಲೆ ರಾಮ, ಲೇಸನಾಡಿದೆ. ಸುಯೋಧನನೇನಧಮನೇ? ನೀನೇಸನೇಱಿಸಿಕೊಂಡು ನುಡಿವೆ."–ಎಂದು ಖತಿಗೊಂಡು ನುಡಿಯುತ್ತಾನೆ! ಕೌರವರನ್ನು ನಾಶಮಾಡಿ ರಾಜ್ಯತೆಗೆದುಕೊಳ್ಳುವುದೇ ಲೇಸು ಎಂಬ ಸಾತ್ಯಕಿಯ ಮಾತಿಗೆ, ದ್ರುಪದನು ಒಪ್ಪಿ, ಕೌರವನಲ್ಲಿಗೆ ಸಾಮವನ್ನು ಪ್ರಯೋಗಿಸಲು ದೂತನನ್ನು ಕಳಿಸಬೇಕೆಂದೂ, ಅದಕ್ಕೆ ಕೌರವನು ಒಪ್ಪುವುದಿಲ್ಲವೆಂದಾಗ ಯುದ್ಧ ಅನಿವಾರ್ಯವೆಂಬ ಅಭಿಪ್ರಾಯವನ್ನು ಸೂಚಿಸುತ್ತಾನೆ. ಆಗ ಸಭೆಯಲ್ಲಿ ಹಿರಿಯರೂ ಯೋಧರೂ ಆಡಿದ ಮಾತುಗಳನ್ನನು ಲಕ್ಷಿಸಿ. ಶ್ರೀಕೃಷ್ಣನು. "ದ್ರುಪದನ ಅಭಿಪ್ರಾಯವು, ಸರಿಯಾದುದು; ನಮ್ಮ ಸ್ನೇಹಿತರಾರೆಂಬುದನ್ನರಿತು ಯುದ್ಧಕ್ಕೆ ನೆರವಾಗಲು, ಕೋರಿ ಪತ್ರಬರೆಯುವುದು; ರಾಜ್ಯವನ್ನು ಬೇಡಲು ಒಬ್ಬ ದೂತ ನನ್ನು ಹಸ್ತಿನಾಪತಿಗೆ ಕಳಿಸುವುದು; ನನ್ನ ಆವಶ್ಯಕತೆ ಬಿದ್ದರೆ ಕರೆಕಳಿ ಸಿರಿ; ಈಗ ಮದುವೆಗೆ ಬಂದಿದ್ದೇನೆ; ಬಹಳ ಕಾಲ ಇಲ್ಲಿರಲಾಗದು; ಮತ್ತೆ ಕರೆಸಿದಾಗ ಬರುತ್ತೇನೆ" ಎಂದು ಪಾಂಡವರನ್ನು ಬೀಳ್ಕೊಳ್ಳುತ್ತಾನೆ. ಹೋಗುವಾಗ ದ್ರುಪದರಾಜ ಮತ್ತು ವಿರಾಟರಾಜ ಇವರುಗಳನ್ನು ಉದ್ದೇಶಿಸಿ ಕೃಷ್ಣ "ಈ ಪಾಂಡವರು ಮಕ್ಕಳು; ಅವರಲ್ಲಿ ಕುಂದುಗಳನ್ನು ಹೆಚ್ಚಾಗಿ ಕಾಣದೆ, ಅವರ ರಾಜ್ಯವನ್ನು ಕೇಳಲು' ಬುದ್ಧಿವಂತರನು' ಕೌರವರಲ್ಲಿಗಟ್ಟುವುದು: ಶಯ್ಯಾಗೃಹದಲ್ಲಿ ಶೋಧಿಸಿ, ಊಟದಲ್ಲಿ ಲಕ್ಷ್ಯವಿಟ್ಟು ನೋಡಿ, ಅವರನ್ನು ನೋಡಿ

ಕೊಂಡು ಬಾಳುವುದು"-ಎಂದು ಹೇಳಿ ದ್ವಾರಕಾಪುರಿಗೆ ಬಿಜಯಂಗೈಸಿದನು. ದ್ರುಪದನು ಒಂದುದಿನ ತನ್ನ 'ಪುರೋಹಿತ'ನನ್ನು ಕರೆದು ಅವನನ್ನು ಕೌರವನ ಪಟ್ಟಣಕ್ಕೆ ಕಳಿಸಿದನು, ಆದರಂತೆ ಪಾಂಡವರಿಗೆ ನೆರವಾಗಲು ಸ್ನೇಹಿತರಿಗೆ ಪತ್ರಗಳೂ ಹೋದವು. ಕೆಲವರು ಪಾಂಡವರಿಗೆ ಇನ್ನು ಕೆಲವರು ಕೌರವರಿಗೆ ನೆರವಾಗಲು ತೆರಳಿದರು. ಅಂದಿನ ಅರಸುಗಳಲ್ಲಿ ಒಟ್ಟಾಗಿ ಎರಡು ಬಣಗಳೇ ನಿರ್ಮಾಣವಾದವು. ಇದನ್ನರಿತ ದುರ್ಯೋಧನನು, "ಅರಿಗಳು ಅತಿ ಹೆಚ್ಚಿದ್ದಾರೆ; ವೈಮರೆತು ಇರಬಾರದು" ಎಂದು ವಿಚಾರಿಸಿ ಕೌರವೇಶ್ವರನು ಅಪ್ತರಲ್ಲಿ ಗುಪ್ತವಾಗಿ ಆಲೋಚಿಸಿ, ಕೃಷ್ಣನನ್ನು ತನ್ನತ್ತ ಮಾಡಿಕೊಳ್ಳಬೇಕೆಂದು ದ್ವಾರಕಾಪುರಿಗೆ ಹೊರಟನು. ಈ ವಿಷಯವನ್ನು ಪಾಂಡವರ ಗೂಢಚಾರರು ಅವರಿಗೆ ತಿಳಿಸಿದೊಡನೆಯೇ ಧರ್ಮರಾಜನು ಅರ್ಜುನನನ್ನು ಶ್ರೀಕೃಷ್ಣನೆಡೆಗೆ ಕಳಿಸಿಕೊಟ್ಟನು.

ಶ್ರೀಕೃಷ್ಣನನ್ನು ಕಾಣಲು ದುರ್ಯೋಧನ ಮತ್ತು ಅರ್ಜುನರು ದ್ವಾರಕೆಗೆ ಬಂದಾಗ ಲಕ್ಷ್ಮೀಲೋಲನು, 'ಮಂಚದಲಿ ನಿದ್ರಾಂಗನೆಯ ಕೇಳಿಯಲಿ'ಎಸೆದಿರ್ದನು. ಆತನನ್ನು ಎಬ್ಬಿಸಲಾರದೆ ಅರ್ಜುನನು ಶ್ರೀಕೃಷ್ಣನ ಪಾದದ ಬಳಿ ಕುಳಿತರೆ, ಬಳಿಕ ಬಂದ ದುರ್ಯೋಧನನು ಮುಕುಂದನ ಶಿರದತ್ತ ಕುಳಿತನು. ಕ್ಷಣದಲ್ಲಿ ಎಚ್ಚತ್ತ ಮುಕುಂದನು ಪಾದದಬಳಿ ಕುಳಿತ ಅರ್ಜುನನ್ನು ಮೊದಲು' ತಲೆಯತ್ತ ಕುಳಿತ ಕೌರವನನ್ನು ನಂತರ ಕಂಡು, ಇಬ್ಬರೂ ಏಕಕಾಲಕ್ಕೆ

* ಪುರೋಹಿತನ ಹೆಸರು 'ಶತಾನಂದ'-ಎಂದು ಯಕ್ಷಗಾನದಲ್ಲಿ ಉಕ್ತವಾಗಿದೆ.

ಬಂದುದನ್ನು ಕಂಡು ಆಚ್ಚರಿಗೊಂಡನು. ಇಬ್ಬರಿಗೂ ವೀಳಯ ವಿತ್ತು, 'ನೀವಿಬ್ಬರೂ ಬಂದ ಕಾರಣವೇನು ಎಂದು ಪ್ರಶ್ನಿಸಿದನು. ಆಗ ಕೌರವೇಶ್ವರನೇ ಮೊದಲು ಮಾತನಾಡಿ, "ನಿಮ್ಮ ಹಾಗೆ ನಮಗೆ ಗೆಳೆಯರಾರು? ದಾಯಾದಿಗಳಾದ ನಮ್ಮ ಮತ್ತು ಪಾಂಡವರ ಮನಸ್ಸುಗಳು ಕದಡಿವೆ; ಭೂಮಿಗಾಗಿ ಯುದ್ಧ ಮಾಡಬೇಕಾಗಿದೆ; ನೀವು ಇಬ್ಬರಿಗೆಯೂ ಬಲವಾಗಬೇಕು" ಎಂದನು. ಇದನ್ನು ಕೇಳಿದ ಶ್ರೀಕೃಷ್ಣನು, "ಕೌರವೇಶ್ವರ, ಕೇಳು; ಭೂಪನಿತೆ ಯಾರೊಡನೆ ಮಧುರವಾಗಿದ್ದು ಮೆಚ್ಚಿದ್ದಾಳೆ? ಯಾರ ಸಂಗಡ ಉರಿಯ ಹಾಯ್ದಿದ್ದಾಳೆ ? ಇದನ್ನು ವಿಚಾರಿಸದೆ ನೃಪರು, ಮಮಕಾರದಲಿ ಹೋರಾಡಿ ನರಕಕ್ಕೆ ಹೋದರು. ಭೂಮಿಗಾಗಿ ಸೋದರರು ಹೋರಾಡಿ ಹರಿಹಂಚಾದರು" ಎಂದು ಜನತೆ ಆಡಿ ಕೊಳ್ಳುತ್ತದೆ. ನಿಮ್ಮೊಳಗೆ ವೈರಬೇಡ; ನೀವು ಸಂತಸದಿಂದ ಕೂಡಿ ಬಾಳುವುದನ್ನು ನೋಡಿ ನಾವು ಸಂತೋಷಪಡುತ್ತೇವೆ.ನೀವಿಬ್ಬರೂ ಸೋದರರು ಟಗರಿನಂತೆ ಹೋರಾಡುವುದನ್ನು ನೋಡಿ ನಗುವರು; ನಿಮ್ಮಿಬ್ಬರಿಗೂ ಕೊನೆಯಲ್ಲಿ ಅಪಕೀರ್ತಿ ತಪ್ಪದು" ಎಂದೆನ್ನಲು, ಕೌರವೇಶ್ವರನು, "ಮುರವೈರಿ, ನಾವು ನಿಮ್ಮಲ್ಲಿ ಧರ್ಮಶ್ರವಣಕ್ಕಾಗಿ ಬಂದಿಲ್ಲ; ನಾವಿಂದು ವೈರಿಗಳು; ಯುದ್ಧವೇ ನಮಗೆ ಬೇಕಾದುದು; ನಿಮ್ಮ ಮನಸ್ಸಿದ್ದರೆ ನಮಗೆ ನೆರವಾಗಬೇಕು" ಎಂದು ಹೇಳುತ್ತಾನೆ. ಕೌರವೇಶ್ವರನಂತೆ, ಅರ್ಜುನನಿಗೂ ಬಂದ ಕಾರಣವೇನೆಂದು ಕೃಷ್ಣ ಕೇಳಿದಾಗ, ಪಾರ್ಥನು, ತಲೆಬಾಗಿ, ಕೈಮುಗಿದು, "ದುರ್ಯೋಧನನೆಂದಂತೆಯೇ ನನ್ನದೂ ಮಾತು. ನಿಮ್ಮ ಪ್ರೀತಿಯಿದ್ದಂತೆ ಮಾಡಿರಿ! ಎಂದೆನ್ನುತ್ತಾನೆ. "ಒಂದು

ಕಡೆ ನಾನು (ಕೃಷ್ಣ). ಇನ್ನೊಂದು ಕಡೆ ಯಾದವಸೇನೆ, ಕೃತವರ್ಮ, ಬಲರಾಮ, ಯಾದವರು ಈ ರೀತಿ ಎರಡು ಭಾಗಮಾಡಿದ್ದೇನೆ; ನಾವು ಮಾತ್ರ ಕಾದುವವರಲ್ಲ: ಬೇಕಾದುದನ್ನು ಆರಿಸಿಕೋ'' ಎಂದು ಕೃಷ್ಣನು ಅರ್ಜುನನಿಗೆ ಸೂಚಿಸಲು, ಅರ್ಜುನನು ಕೃಷ್ಣನನ್ನು ಆಯ್ದುಕೊಂಡರೆ, ದುರ್ಯೋಧನನು ಬಲರಾಮ, ಕೃತವರ್ಮ ನಾರಾಯಣಸೇನೆಯನ್ನೇ ಆಯ್ದುಕೊಳ್ಳುತ್ತಾನೆ. "ನಾವು ಉಂಡಾಡಿ ಭಟ್ಟರು; ಬರಿಗೈಬಂಟರು'' ಎನ್ನುತ್ತಾನೆ ಕೃಷ್ಣ. ಅದಕ್ಕೆ ಅರ್ಜುನನು, ಭಕ್ತರು ನಾವು, ಒಡೆಯರು ನೀವು: ಸಾರಥಿಯಾಗಿ ನೀವು ನಮ್ಮನ್ನು ಕಾಪಾಡಬೇಕು' ಎಂದು ಹೇಳಿದಾಗ ಕೃಷ್ಣನು ಅರ್ಜುನನೊಡಗೂಡಿ ಪಾಂಡವರತ್ತ ಬಿಜಯಂಗೈಸಿದನು.

ಧರ್ಮರಾಯನ ಪತ್ರದ ಮೇರೆಗೆ ಶಲ್ಯನು ಸೈನ್ಯಸಹಿತ, ಪಾಂಡವರಿಗೆ ಸಹಾಯ ಮಾಡಲು ಹೊರಟನು. ಈ ವಾರ್ತೆಯನ್ನು ತಿಳಿದು ದುರ್ಯೋಧನನು, ದಾರಿಯಲ್ಲಿ ಶಲ್ಯನ ಸೈನ್ಯಕ್ಕೆ ಬಿಡಾರ, ಆಹಾರಾದಿಗಳ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿಸಿದನು. ಆದುದರಿಂದ ಶಲ್ಯನು ದುರ್ಯೋಧನನ ಹಂಗಿಗೊಳಗಾದನು. ಆದರೂ ಶಲ್ಯನು ಬಂಧುಗಳಾದ ಪಾಂಡವರೆಡೆಗೆ ತೆರಳಿ, "ನೀವು ಸತ್ಯವಂತರು; ನವೆದಿದ್ದೀರೆಂಬುದು ನಿಜ; ರಾಜ್ಯಲಕ್ಷ್ಮಿಯು ನಿಮಗೇ ಸೇರುತ್ತಾಳೆ'' ಎಂದೆನ್ನಲು ಧರ್ಮರಾಜನು, "ಮಾವ, ನೀವು ನಮ್ಮ ಹಿತೈಷಿಗಳು, ರಾಜ್ಯಲಕ್ಷ್ಮಿ ನಮಗೆ ಸೇರಬೇಕಾದರೆ, ಕರ್ಣನಿಗೆ ನೀವು ಸಾರಥಿಯಾಗಿ, ಯುದ್ಧಭೂಮಿಯಲ್ಲಿ ಅವನನ್ನು ನಿಂದಿಸಿ, ತೇಜೋವಧೆಮಾಡಬೇಕೆಂದೂ, ನಮ್ಮನ್ನು ಗೆಲಿಸಬೇಕೆಂದೂ'' ಪ್ರಾರ್ಥಿಸಿದನು. ಧರ್ಮರಾಯನ ಪತ್ರದ ಮೇರೆಗೆ,

ಚೋಳ, ಪಾಂಡ್ಯ, ಕೇರಳ, ಶಿಶುಪಾಲ ನಂದನ ಧೃಷ್ಟಕೇತು, ಪರಾಳ ಮಾಗಧ, ಚೀನ, ಭೋಟಕ, ಬರ್ಬರ, ಮೊದಲಾದ ದೇಶಗಳ ರಾಜರು ಅವನ ಪಕ್ಷಕ್ಕೆ ಸೇರಿದರು. ವಿರಾಟನಂತೂ ಸರಿಯೇ.

ಮೊದಲೇ ನಿರ್ಣಯಿಸಿದಂತೆ ದ್ರುಪದನ ಪುರೋಹಿತನನ್ನು ದುರ್ಯೋಧನನ ಆಸ್ಥಾನಕ್ಕೆ ಮಾತುಕತೆಗೆ ಕಳಿಸಲು, ದುರ್ಯೋಧನನು 'ಚಪಲಕರ್ಣ'ನೊಡನೆ ಆಲೋಚಿಸಿ, ಯುದ್ಧವನ್ನೇ ಕೈಕೊಳ್ಳುವುದಾಗಿ ತಿಳಿಸಿದನು. ಅಲ್ಲದೆ ಈ ನಿರ್ಣಯವನ್ನು ಪಾಂಡವರಿಗೆ ತಿಳಿಸಲು ಸಂಜಯನನ್ನು ಪಾಂಡವರ ಆಸ್ಥಾನಕ್ಕೆ ಕಳಿಸಿದನು. ಸಂಜಯನನ್ನು ಆದರದಿಂದ ಬರಮಾಡಿಕೊಂಡ ಪಾಂಡವರು, ಒಂದು ಚಿಕ್ಕಸಭೆ ಸೇರಿಸಿದರು; ಆ ಸಭೆಯಲ್ಲಿದ್ದ ಸಂಜಯನು ಪಾಂಡವರ ವೀರೋಚಿತ ಮಾತುಗಳನ್ನೂ, ಅವರಿಗೆ ಮುರಾರಿಯ ಸಹಾಯವಿರುವುದನ್ನು ಕೇಳಿ ತಿಳಿದು ಗಾಬರಿಯಾದನು."ಬೇಡುವರು ಪಾರ್ಥಿವರೇ? ತಮ್ಮ ಜನನವ ನೋಡಿ ನುಡಿಯಲಿ: ಕೃಷ್ಣನು ವೈರವ ಬಿತ್ತಿ ಬೆಳೆಸುವನು:ದ್ರುಪದ ವಿರಾಟರೆಂಬವರು ಹುಳುಗಳು". ಮುಂತಾಗಿ ದುರ್ಯೋಧನನು ಆಡಿದ ಮಾತುಗಳನ್ನು ಸಂಜಯನು ಅವರಿಗೆ ತಿಳಿಸಿದಾಗ ಅಲ್ಲಿ ನೆರೆದಿರ್ದ ವೀರರೆಲ್ಲ ಒಕ್ಕೊರಲಿನಿಂದ" ಉದುರ ಹೊಯ್ವುವು ಹಲ್ಲುಗಳ" ಎಂದರೆ, ಭೀಮನು, "ಕೌರವ ನಾಯಿಯ ತೊಡೆಯನ್ನೇ ಮುರಿವೆ" ಎಂದು ಘೂತ್ಕರಿಸಿದನು. ಶ್ರೀಕೃಷ್ಣನು, ಗುಪ್ತವಾಗಿ ಸಂಜಯನನ್ನು ಕರೆದು ಅವನಿಗೆ ತಿಳಿಹೇಳಿದನು. ಆ ಮಾತುಗಳಲ್ಲಿ 'ಬಲುಹುಮೊಲುಹಿನ' ನುಡಿಗಳಿದ್ದವು. ಮಾರನೆಯ ದಿನ, ಸಂಜಯನಿಗೆ, ಸಭೆಯಲ್ಲಿ, ಕೌರವಪಕ್ಷದ ವೀರರೆಲ್ಲರ ಕುಶಲ

ಸಮಾಚಾರದ ಬಗೆಗೆ ಪಾಂಡವರು ವಿಚಾರಿಸಿದರೆಂದು ತಿಳಿಸಲು ಹೇಳಿದರು. ಸಂಜಯನು ಮರಳಿ ಬಂದು (ಹಸ್ತಿನಾವತಿಗೆ) ಆ ರಾತ್ರಿ ಧೃತರಾಷ್ಟ್ರನಿಗೆ ಸುದ್ದಿಯನ್ನು ವರದಿಮಾಡಿದನು. ಧೃತರಾಷ್ಟ್ರನಿಗೆ ಇದರಿಂದ ನಿದ್ರೆ ಬಾರದಿರಲು ವಿದುರನನ್ನು ಕರೆಕಳು ಹಿಸಿದನು. ವಿದುರನು ರಾಜನಿಗೆ ಆ ರಾತ್ರಿ ರಾಜನು ನಡೆವ ರೀತಿಯನ್ನು ಬೋಧಿಸಿದನು. ಅದು 'ವಿದುರನೀತಿ' ಯೆಂದು ಮಹಾಭಾರತದಲ್ಲಿ ಪ್ರಸಿದ್ಧವಿದೆ; ಅವನು ಉಪದೇಶಿಸಿದ ಹಲವು ಮಾತುಗಳು ಜನಸಾಮಾನ್ಯರಿಗೆ ಬಲು ಉಪಯುಕ್ತವಾಗಿ ರುವುದರಿಂದ ಕೆಲವನ್ನು ಮಾತ್ರ ಇಲ್ಲಿ ಉದಾಹರಿಸಲಾಗಿದೆ. "ಮನುಷ್ಯನಿಗೆ, ನಾನಾ ಚಿಂತೆಗಳಿಂದ ನಿದ್ರೆಬರುವುದಿಲ್ಲ. ಒಂದು ತಪ್ಪು ಮಾಡಲು ಹೋದರೆ ಮತ್ತೊಂದು ಅದರಿಂದ ಸಂಭವಿ ಸುತ್ತದೆ; ಹಲವು ದುಷ್ಟಮಕ್ಕಳನ್ನು ಹಡೆವುದಕ್ಕಿಂತ ಸರ್ವಗುಣಾ ವಲಂಬಿಯಾದ ಒಬ್ಬನನ್ನೇ ಹಡೆವುದು ಲೇಸು; ಸತ್ಯವೊಂದೇ ಸ್ವರ್ಗಕ್ಕೆ ಸೋಪಾನ; ಪಾಪದಿಂದ ಧನವ ಸಂಪಾದಿಸಬಾರದು; ಕೆಟ್ಟ ಅಧಿಕಾರಿಗಳಿಂದ ದೇಶದ ದ್ರವ್ಯ ನಾಶವಾಗುತ್ತದೆ; ದೈವದ ನೆಲೆಯನರಿಯಬೇಕು: ನಿಂದ್ಯಕಾರ್ಯವ ಬಿಟ್ಟು ಲೋಕಹಿತಕಾರ್ಯ ಗಳಲ್ಲಿ ತೊಡಗಬೇಕು; ನೀತಿಯಿಂದ ರಾಜನು ರಾಜ್ಯವನ್ನು ಕಾಪಾಡ ಬೇಕು: ಧರ್ಮದಿಂದ ನಡೆಯಬೇಕು; ದುರ್ಮಂತ್ರಿಯಿಂದ ರಾಜ್ಯಕ್ಕೆ ಕೇಡು; ಸತ್ಪುರುಷರು ಆಡಿದಮಾತಿಗೆ ತಪ್ಪುವುದಿಲ್ಲ" ಇಂತಹ ನೀತಿಯನ್ನು ಧೃತರಾಷ್ಟ್ರನಿಗೆ ಹೇಳಿ, "ಪಾಂಡವರು ಸತ್ಯವಂತರು, ಅವರಿಗೆ ಕೇಡು ಬಗೆಯಬೇಡ" ಎಂದುಪದೇಶಿಸಿ ದನು. ಆ ಮೇಲೆ ವಿದುರನ ಹೇಳಿಕೆಯಮೇರೆಗೆ ಸನತ್ಸುಜಾತನನ್ನು

ಕರೆಯಿಸಿ ಅವನಿಂದ ಧೃತರಾಷ್ಟ್ರನು ತತ್ವೋಪದೇಶ ಪಡೆದನು. ಅವನು ಧೃತರಾಷ್ಟ್ರನಿಗೆ ಉಪದೇಶಿಸಿದ ಮಾತುಗಳಿವು:

ಧರ್ಮಕ್ಕೇ ಜಯ; ಎಷ್ಟು ಅಹಂಕಾರಪಟ್ಟರೂ ಸಾವಿನ
ದವಡೆಯಲ್ಲಿ
ಅದೆಲ್ಲವೂ ವ್ಯರ್ಥ, ನಿನ್ನ ಮಕ್ಕಳದೆಸೆಯಿಂದಾಗಿ
ಬ್ರಹ್ಮಾಂಡವೇ
ಒರಿದಾಗುತ್ತದೆ; ಕೃಷ್ಣನು ಮಾನವನಲ್ಲ, ಸಾಕ್ಷಾತ್
ವಿಷ್ಣು ....ಇತ್ಯಾದಿ

ಈ ಎಲ್ಲ ಮಾತುಗಳನ್ನು ಕೇಳಿದ ಧೃತರಾಷ್ಟ್ರನ ಮನಸ್ಸಿಗೆ ನೆಮ್ಮದಿಯಾಯಿತು (ವಿದುರ ನೀತಿ ಮತ್ತು ಸನತ್ಕುಮಾರನ ಉಪದೇಶ ಈ ಭಾಗ ಕಾವ್ಯದಲ್ಲಿ ತಿಳಿದುಕೊಳ್ಳುವವರಿಗೆ ಅತ್ಯಂತ ಮಹತ್ವದ್ದು. ಈ ಪ್ರಸಂಗದಲ್ಲಿ ವಿದುರನು ಮಹಾಜ್ಞಾನಿಯೆಂಬುದು ಸುವ್ಯಕ್ತವಾಗಿದೆ.

ಸಂಜಯನು ಪಾಂಡವರೆಡೆಗೆ ಹೋಗಿಬಂದುದನ್ನು ವಿಚಾರಿಸಲು, ಕೌರವೇಶ್ವರನು ಒಂದು ಚಿಕ್ಕಸಭೆ ಕರೆದಿರುತ್ತಾನೆ. "ಪಾಂಡವರು ಸಭೆ ಕರೆದು ಅದರಲ್ಲಿ ಎಲ್ಲರೂ ಕೌರವೇಶ್ವರನನ್ನು ಜರಿದರು" ಎಂಬುದನ್ನು ತಿಳಿಸುತ್ತಾನೆ. ಅಲ್ಲದೆ ಶ್ರೀಕೃಷ್ಣನು "ದ್ರೌಪದಿಗೆ ಮಾಡಿದ ಅಪಮಾನವನ್ನು ನೆನಪಿಗೆ ತಂದುಕೊಳ್ಳಲು ತಿಳಿಸಿ, ಗಂಧರ್ವನಿಂದಾದ ಅಪಮಾನವನ್ನೂ,ಗೋಗ್ರಹಣ ಕಾಲದ ಸೋಲನ್ನು ನೆನಪಿಗೆ ತಂದುಕೊಳ್ಳಲು ನಿಮ್ಮ ಒಡೆಯನಿಗೆ ತಿಳಿಸು"

ಎಂದು ಹೇಳಿರುವುದನ್ನು ಸಂಜಯನು ದುರ್ಯೋಧನನ ಸಮ್ಮುಖದಲ್ಲಿ ಸಭೆಗೆ ವರದಿಮಾಡುತ್ತಾನೆ. ಈ ಮಾತು ಕೇಳಿದ ಕೌರವೇಶ್ವರನು ಕುಪಿತನಾಗಿ, ಸಂಜಯನನ್ನು "ನೂಕಾಚೆ" ಎಂದುದಲ್ಲದೆ. ಅವನನ್ನು 'ಭಂಡ' ಎಂದು ಮೂದಲಿಸಿದನು. ಆಗ ಭೀಷ್ಮರು. "ದುರ್ಯೋಧನ, ಅರ್ಜುನನನ್ನು ಸೋಲಿಸುವುದು ಯಾರಿಂದಲೂ ಸಾಧ್ಯವಿಲ್ಲ" ಎಂದು ಹೇಳಿದರೆ, ದ್ರೋಣಾಚಾರ್ಯ. ಧೃತರಾಷ್ಟ್ರರು ಸಂಧಿಗೆ ಸಲಹೆ ಮಾಡಿದರು. ಧೃತರಾಷ್ಟ್ರ:

"ಬೇಡಮಗನೇ ಕೃಷ್ಣರಾಯನು ರೂಢಿಸಿದ ಕಟ್ಟಾಳು
ಕಿಲಕಿಲರಾಡುವರು ಸಾಕ್ಷಾತು ಲಕ್ಷ್ಮೀಕಾಂತ ಹರಿಯೆಂದು;
ಕೂಡಿಕೊಂಡಿಹನಾತನವರನು, ಕೇಡನವರಿಗೆ ಬರಿಸಲೀಯನು:
ನಾಡನೊಪ್ಪಿಸು ಮಗನೆ" ಎಂದು ಸೂಚಿಸಿದನು

ಅದಕ್ಕೆ ಪ್ರತ್ಯುತ್ತರವಾಗಿ ದುರ್ಯೋಧನನು.

"ಗುರು, ನದೀಸುತರು ಇರಲು ಕುರುಕುಲಕೆ ಕೇಡಹುದೇ?
ಕೊಲುವೊಡೆ ಸುರಪತಿಯು ಸುತನಳವೇ ?
ಅರ್ಜುನನ ಕೈಯಲಿ ದೈತ್ಯಾರಿ ಕೌರವರ ಕೊಲಿಸುವನು;
ಕಾವನಾತನೆ, ಕೊಲುವನಾತನೆ, ಸಾವನಾತನ ಕೈಯಬಾಯಲಿ;
ನೀವು ಪಾಂಡವರೊಡನೆ ಸುಖದಲಿ ರಾಜ್ಯವಾಳುವುದು;
ಸಾವಿಗಾನಂಜುವೆನೆ? ನಿಮ್ಮನು ಕಾವನೈ ಗದುಗಿನ
ವೀರನಾರಯಣ".

ಎಂದು ಹೇಳಿ ಅವನನ್ನು ಸುಮ್ಮನಾಗಿರಿಸುತ್ತಾನೆ. ಧರ್ಮರಾಜನು ಶ್ರೀಕೃಷ್ಣನ ಹತ್ತಿರ ಬಂದು "ಲಕ್ಷ್ಮೀಲೋಲ, ಕೌರವ ಕ್ಷಿತಿಪಾಲನಲಿ

ನಮಗಿನ್ನೇನು ಘಟಿಸುವುದು? ಸಂಧಿಯೋ, ಸಮರವೋ? ಎಮಗಾವ ಪದವು?" ಎಂದೆನ್ನಲು ಕೃಷ್ಣನು, "ನಿನ್ನ ಅಭಿಮತವೇನು? ಸಂಧಾನವೋ, ಸಂಗ್ರಾಮವೋ? ಮನದಲ್ಲಿ ಸಂದೇಹವಿರಿಸಿಕೊಳ್ಳದೆ ಹೇಳು" ಎಂದು ಧರ್ಮರಾಜನನ್ನು ಕೇಳಿದನು, "ಸೋದರರೊಳಗೆ ಕಾದಾಡಿ ದುರ್ಯಶ ಪಡೆದರೆಂಬ ಅಪವಾದ ಬೇಡ; ಐದೂರು ಕೊಟ್ಟರೆ ಸಾಕು; ನೀವು ಹೋಗಿ ಮಾತನಾಡಿ; ಎನಗೆ ಸಂಧಿಯೇ ಲೇಸು" ಎಂದು ಧರ್ಮರಾಯನು ಹೇಳಿದನು. ಆಗ ಕೃಷ್ಣನು ಪಾಂಡವರಲ್ಲಿ ಉಳಿದವರನ್ನು ಕರೆದು ಪ್ರತ್ಯೇಕವಾಗಿ ವಿಚಾರಿಸಲು ಭೀಮಾರ್ಜುನ ನಕುಲರು ಧರ್ಮರಾಜನ ಅಭಿಪ್ರಾಯವೇ ತಮ್ಮದೆಂದು ಸೂಚಿಸಿದರೆ, ಸಹದೇವ ಮಾತ್ರ 'ಸಂಧಿ ಬೇಡ, ಸಂಗರ ಬೇಕು' ಎಂದುತ್ತರ ಹೇಳುತ್ತಾನೆ. ಕೃಷ್ಣನು ಕೊನೆಯಲ್ಲಿ ದ್ರೌಪದಿಯನ್ನು ಕರೆಯಿಸಿ ಆಲೋಚಿಸುತ್ತಾನೆ. ಆಕೆ ಸಂಧಿಮಾತು ಕೇಳಿ, ಕಿಡಿಕಿಡಿಯಾದಳು! ಪಾಂಡವರಿಗೆ "ಯತಿಗಳಾದಿರಿ ನೀವು" ಎಂದು ಮೂದಲಿಸಿ, ಭೀಮಸೇನ, ನೀನು ಅದ ಘನಮಾನಹಾನಿಗಳ ಮರೆದೆಯಾ ?" ಎಂದು ಕೇಳಿ, "ತಾನೇ, ತನ್ನೈವರು ಮಕ್ಕಳು, ಸಹದೇವ, ಘಟೋತ್ಕಚ, ಅಭಿಮನ್ಯುಗಳೊಡಗೂಡಿ ಕಾದುವುದಾಗಿ ತಿಳಿಸಿ", ತನಗಾದ ಅಪಮಾನವನ್ನು ನೆನೆದು ಕಣ್ಣೀರಿಟ್ಟಳು. ಆಗ ಭೀಮನೂ ಕುಪಿತನಾಗಿ, ' "ನಿನ್ನೀ ಸುರಿದ ಕಂಬನಿಗಳಿಗೆ ಶತಸಾವಿರಮಡಿ ಕಂಬನಿಯ ಸುರಿಸುವೆ ಹಗೆಯ ಹೆಂಡಿರಲಿ" ಎಂದು ತಿಳಿಸುತ್ತಾನೆ. ಅಲ್ಲದೆ ಸಂಧಿಗೆ ಧರ್ಮಜ, ಅರ್ಜುನ, ನಕುಲರಂತೆ ಒಪ್ಪುವನಲ್ಲ ಎನ್ನುತ್ತಾನೆ.

ಈ ರೀತಿ ಸಂಧಾನದ ವಿಷಯದಲ್ಲಿ ಅಣ್ಣತಮ್ಮಂದಿರಲ್ಲಿ ಭಿನ್ನಾಭಿಪ್ರಾಯವಾದುದರಿಂದ ಶ್ರೀಕೃಷ್ಣನು, ಸಂಧಾನಕ್ಕೆ ಹೋಗುವ ಮುನ್ನ ಧರ್ಮರಾಜನ ನಿಶ್ಚಿತ ಅಭಿಪ್ರಾಯವೇನೆಂದು ಕೇಳಿದುದಕ್ಕೆ ಅವನು ಕೌರವರು ಐದೂರುಗಳ ಕೊಟ್ಟರೆ ಹಮುಳ: ಮುನಿದರಾದಡೆ ಕದನವನೆ ಜೋಡಿಸುವುದು; ಉಚಿತ ಅನುಚಿತ ನಿನಗೆ ಗೊತ್ತು; ಎಮ್ಮಭ್ಯುದಯ ನಿನ್ನಾಧೀನ ' ಎನ್ನುತ್ತಾನೆ; ಹೀಗೆ ಪಾಂಡವರ ಅಭಿಪ್ರಾಯ ತಿಳಿದು ಶ್ರೀಕೃಷ್ಣನು, ಸೈನ್ಯ, ಸಾರಥಿ, ಶಸ್ತ್ರಸಹಿತ, ಮಂಗಳಮುಹೂರ್ತದಲ್ಲಿ ಸಂಧಾನಕ್ಕೆ ಹಸ್ತಿನಾವತಿಗೆ ಹೊರಟನು; ಮುನ್ನೆಚ್ಚರಿಕೆಯಿಂದಲೇ ಶಸ್ತ್ರಾಸ್ತ್ರಗಳನ್ನೂ ಒಯ್ದನು. ಕೊನೆಯ ಗಳಿಗೆಯಲ್ಲಿ ಕೃಷ್ಣನಿಗೆ ದ್ರೌಪದಿ ಸಂಧಾನ ಬೇಡವೆಂದೇ ಎಚ್ಚರಿಸಿದಳು! "ಎನ್ನಯ ಉಳಿವ, ಎನ್ನಯ ಪಳಿವ ನೀನೇ ಬಲ್ಲೆ;" ಎನ್ನಲು ಶ್ರೀಕೃಷ್ಣನು, "ಕಾಳಗವನೇ ಬಲಿದು ಬಹೆ; ನಿನಗೇಳಿಲವ ಮಾಡಿದರೆ ರಿಪುಗಳ ಸೀಳಿ ಕರುಳನೇ ಮುಡಿಸದಿಹೆನೇ? ನಿನ್ನಾಣೆ, ವಸುದೇವ ದೇವಕಿಯರಾಣೆ; ಸಂಧಿಯ ಮುರಿದು ಬಹೆವು" ಎಂಬ ತೀರ್ಮಾನದಿಂದಲೇ ಹಸ್ತಿನಾವತಿಗೆ ತೆರಳಿದನು; ತನ್ನ ಆಗಮನದ ಸುದ್ದಿಯನ್ನು ಕೌರವರಿಗೆ ತಿಳಿಸಿದನು. ಈ ಸುದ್ದಿಯನ್ನು ತಿಳಿದ ಧೃತರಾಷ್ಟ್ರನು, ಅಲಂಕರಿಸಿ, ಊರನ್ನು ಎದುರುಗೊಳ್ಳಲು 'ಕೃತಾರ್ಥರಾದವರನ್ನು' ಕಳಿಸುತ್ತಾನೆ. ಪಾಂಡವ ಪಕ್ಷಪಾತಿಯಾದ ಶ್ರೀಕೃಷ್ಣನು ತಮ್ಮ ವೈರಿಯೆಂದೇ ಭಾವಿಸಿದ ಕೌರವನು, "ಮುರವೈರಿ ನಗರಿಗೆ ಬರಲಿ, ಆತನನ್ನು ಬಿಗಿದು ಕೆಡಹುವೆನು" ಎಂದು ತೀರ್ಮಾನಿಸಿದನು! ಇದನ್ನು ಕೇಳಿದ ಭೀಷ್ಮರು, "ಎಲೆ ಪಾತಕಿ, ನೀ ಕೃಷ್ಣನನು ಬಿಗಿವಾತನೇ ? ಈ

ಮಾತು ಕೇಳಿದರೆ ಪಾತಕವು ಬರುವುದು" ಎಂದು ಅಲ್ಲಿಂದೆದ್ದು ತನ್ನ ಮಂದಿರಕ್ಕೆ ಹೋದರು. ಗಾಂಗೇಯ, ದ್ರೋಣ, ಗೌತಮ, ವಿದುರ, ಶಲ್ಯಾದಿ ಹಿತವರು. ತರುಣಿಯರು ಶ್ರೀಕೃಷ್ಣನನ್ನು ಇದಿರುಗೊಂಡು ಕರೆತರಲು ಹೋದರು. ದೇವನನ್ನು ನೋಡಿ ಅನೇಕರ ಕಣ್ಮನಗಳು ತಣಿದವು. ಭೀಷ್ಮಾದಿಗಳನ್ನು ಹರಸಿ, ನಗರದ ಸೌಂದರ್ಯವನ್ನು ನೋಡುತ್ತ ಧೃತರಾಷ್ಟ್ರನ ಅರಮನೆಗೆ ಕೃಷ್ಣನು ಬಂದನು: ಧೃತರಾಷ್ಟ್ರನಿಂದ ಭಕ್ತಿಯ ಕಾಣಿಕೆ ಪಡೆದು ಸ್ವೀಕರಿಸಿದನು. ಅಲ್ಲಿಗೆ ಬಂದ ದ್ರೋಣ, ಕೃಪಾಚಾರ್ಯ, ಭೀಷ್ಮಾಚಾರ್ಯರನ್ನು ಬೀಳ್ಕೊಂಡು ವಿದುರನ ಮನೆಗೆ ಹೋಗುವುದಾಗಿ ತಿಳಿಸಿ ಗಾಂಧಾರಿಯನ್ನು ಆಶೀರ್ವದಿಸಿದನು: ದುರ್ಯೋಧನನು ತನ್ನ ಮನೆಗೆ ಹರಿ ಬಾರದಿರನೆಂದು ಸಕಲ ವ್ಯವಸ್ಥೆಗಳನ್ನೂ ಮಾಡಿಸಿಟ್ಟಿರಲು, ಅವನ್ನು ಒಲ್ಲದೆ, 'ಪರಭಾಗವತಮಸ್ತಕರತ್ನ' ವಿದುರನ ಮನೆಗೆ ಹೊರಟಾಗ ಕೃಷ್ಣನನ್ನು ಕಂಡವರ ಕಂಗಳು ಪಾವನವಾದವು! 'ನಿಜಶರಣ ವಿದುರ' ನು 'ಬಾಗಿಲಲ್ಲಿ ಅಚ್ಯುತನನ್ನು ಕಂಡು ಭಕ್ತ್ಯಾತುರದಿಂದ ಹಿರಿಹಿರಿ ಹಿಗ್ಗಿದನು; ಹರಿಪದನಳಿನಯುಗದೊಳೊಡಲನೀಡಾಡಿದನು ! ಭಕ್ತಿಕೇಳಿಯಲಿ ಸ್ವೈಹುರೆದನು'! ಶ್ರೀಕೃಷ್ಣನು ವಿದುರನ ಮನೆಯಲ್ಲಿ, ಅತಿ ಹಸಿದಿದ್ದರೂ ಒಂದು ಬೊಗಸೆ ಹಾಲಿನಿಂದ ಹಸಿವ ನೂಕಿದನು. ಭೀಷ್ಮಾದಿಗಳು ಈ ಆಶ್ಚರ್ಯ ಸನ್ನಿವೇಶವನ್ನು ಕಂಡು ಹೊಗಳಿದರು. ಅಲ್ಲಿಯೇ ವಿದುರನ ಮನೆಯಲ್ಲಿದ್ದ ಕುಂತೀದೇವಿ ಇದನ್ನು ತಿಳಿದು, ಕಾಣಲು ಬಂದಾಗ, ಕೃಷ್ಣನೇ ಮೊದಲು ತಾನೆದ್ದು ಕುಂತೀದೇವಿಗೆ ಕೈಮುಗಿದನು. ಕುಂತಿಯೂ ಕೃಷ್ಣರಾಯನನ್ನು ಹೊಗಳಿದಳು. ದೇವಕಿ,

ವಸುದೇವ, ಬಲದೇವ. ಸೌಭದ್ರಾದಿಗಳ ಕುಶಲ ಸಮಾಚಾರ ಕೇಳಿ ತಿಳಿದಮೇಲೆ, ತನ್ನ ಮಕ್ಕಳ ಕುಶಲವನ್ನು ಕೇಳಿ ತಿಳಿದು ಹರುಷ ಪಟ್ಟಳು. ಉತ್ತಮ ಮಕ್ಕಳನ್ನು ಪಡೆದುದಕ್ಕೆ ಕುಂತೀದೇವಿಯನ್ನು ಕೃಷ್ಣನು ಹೊಗಳಿದನು. ಮುಂದುವರಿದು

"ನಿನ್ನ ಸುತರು ಲೋಕಮೆಚ್ಚಲು ದೃಢೈಕಸತ್ಯರು;
ನುಡಿದ ಕಾಲವ ನೂಂಕಿದರು: ರಾಜ್ಯಾಭಿಲಾಷೆಗೆ
ಬಲವ ನೆರಹಿದರು;
ಆ ಕುಮಾರರಿಗೆ ಅರ್ಧರಾಜ್ಯವನೀಸಿಕೊಡುವ
ವಿವೇಕದಲಿ ನಾವ್ ಬಂದೆವು"–

ಎನ್ನಲು ಆ ಮಾತು ಕೇಳಿ ಕುಂತಿಗೆ ಪರಮಹರುಷವಾಯಿತು. ದುರ್ಯೋಧನನ ಅನುಮತಿಯಂತೆ ಕೃಷ್ಣನು ವಿದುರನೊಡನೆ ಸಮಯವನ್ನು ಪಡೆದು, ದುರ್ಯೋಧನನ ಆಸ್ಥಾನಕ್ಕೆ ಹೋದನು. ಅಂದು ಮಹಾರಾಜಸಭೆಯನ್ನೇ ಕರೆದು, ತನ್ನ ಠೀವಿಯನ್ನೇ ದುರ್ಯೋಧನನು ಮೆರೆದನು. ದುರ್ಯೋಧನನನ್ನುಳಿದು ಎಲ್ಲ ಸಮರಸರ್ವಜ್ಞರುಗಳು ಕೃಷ್ಣನು ಸಭೆಗೆ ಬಂದೊಡನೆಯೇ ಎದ್ದು ತಲೆಬಾಗಿದರು. "ಕಡುಕುಮತಿ ಕೌರವನು ಪಾತ್ರ ಇಳಿಯ ದಿರ್ದನು ಸಿಂಪವಿಷ್ಟರದ"–ಆಗ ಶ್ರೀಕೃಷ್ಣನು ತನ್ನುಂಗುಟದ ತುದಿಯಿಂದ ಭೂಮಿಯನ್ನೊತ್ತಲು, ಸುಯೋಧನನ ಮಣಿಖಚಿತ ಕಾಂಚನದ ಪೀಠದ ಗೊಣಸು ಮುರಿದು, ಕೌರವನು ಹರಿಯ ಚರಣದ ಮೇಲೆ ಬಿದ್ದನು. ಬಿದ್ದ ಕೌರವನನ್ನು ಭೀಷ್ಮರು ಸಹಿತ, ಕೃಷ್ಣನೂ ಮೇಲೆತ್ತಲು ಮತ್ತೆ ಕೌರವನು ಪೀಠಕ್ಕೆ ಹೋದನು. ಸಭೆಯಲ್ಲಿ ಕೌರವನ ಕುಶಲ ಸಮಾಚಾರ ಕೇಳಿದರೆ, ಆತನು ಕೃಷ್ಣನಿಗೆ:

"ದೇವ, ನೀವು ನಮ್ಮರಮನೆಗೆ ಬಾರದೆ, ವಿದುರನ
ಮನೆಯಲುಂಡಿರಿ;
ಗೋವಳಿಗತನ ನಿಮ್ಮ ವೈಸಿರಿ ತಪ್ಪದಾಯ್ತು;
ಈ ಕೃಪನ, ಈ
ದ್ರೋಣನ, ಈ ಗಂಗಾಕುಮಾರನ, ಮನೆಯ
ಹೊಗದೆ ಅವಿವೇಕಿ
ತೊತ್ತಿನಮಗನಮನೆಯಲಿ ಮಹಿಮ ನೂಕಿದಿರಿ;
ಸಾಕಿದಾತನು
ನಂದಗೋಪನು; ನಿಮಗೇಕೆ ರಾಯರ ಠೀವಿ"—

ಎಂದು ಜರಿದು ಬಿರುನುಡಿ ನುಡಿದುದಕ್ಕೆ, ವಿದುರನು :

"ಮರುಳ, ನೀ ನಿಂದಿಸಿದ ನುಡಿಗುತ್ತರವ
ನೀಯಲದೇಕೆ !
ನಿಮ್ಮಯ ವರಜನನಿಗೆ ಆದಿಯಲಿ ಗಂಡನದಾರು?
ದಾನವಾಂತಕ
ಬಿಲ್ಲಿ ನಮ್ಮಿಬ್ಬರ ಗುಣಂಗಳ, ಕಲಿಭೀಮ ನಿನ್ನಯ
ತೊಡೆಗಳನು
ಮುರಿವಾ ಸಮಯದಲಿ ನಿನ್ನನು ಕಾಯಬೇಕೆಂದು
ಉಳಿಹಿದೆನು ಧನುವ;
ಕೆಡೆನುಡಿಸಿಕೊಂಡಿನ್ನು ಕಾವೆನೆ? ಪೊಡವಿಪತಿ
ಕೇಳು" ಎಂದು

ತಾನು ಹಿಡಿದ ಬಿಲ್ಲನ್ನೇ ಮುರಿದು ಹಾಕಿದನು.

ಈ ಘಟನೆ ನಡೆದುದನ್ನು ನೋಡಿ ಗಾಂಧಾರಿ ಧೃತರಾಷ್ಟ್ರರು ವಿಹ್ವಲರಾಗಿದರು: ಭೀಷ್ಮ ದ್ರೋಣರು ಅಳಲಿದರು: ಮಧುಸೂದನನು ವಿದುರನ ತಿಳುಹಿ. "ಕೇಳಲೆ ಕೌರವ, ನಮ್ಮಯ ಕುಲವೇ ಬೇರೆ" ಎಂದು ನುಡಿಯುತ್ತ ಮುಂದುವರಿದು "ಕೌರವರ ರಾಯ. ಕೇಳೈ. ಪ್ರಿಯನು ನೀನೆಮಗಲ್ಲ. ನಿನ್ನಾಲಯದೊಳೆಂತೆ ಮಾಗೂಟ ಸಂಭವಿಸುವುದು? ವೈರಿಗಳ ನಿಳಯದೊಳನ್ನಪಾ-ನಾದಿಗಳ ಕೊಳಲಾಗದು: ಇದು ರಾಜನೀತಿ; ಹಗೆಯ ನಂಬುವೆ ನೆಂತು?" ಎಂದೆನ್ನುತ್ತಾನೆ. ಆಗ ಕೌರವನು, "ನಿನ್ನ, ಪಾಂಡು ಪುತ್ರರ ಕೂರುಮೆಗೆ ನಾನಂಜೆ: ನೀ ಬಂದನುವ ಹೇಳು" ಎನ್ನಲು ಕೃಷ್ಣನು, "ಪಾಂಡವರು ನಿನ್ನವರು; ವನವಾಸದಿಂದ ನವೆದರು; ಅವನಿಯರ್ಧವನೀವುದು; ಪುರುಷಾರ್ಥವನು ಸಂಚಿಸೆ ಕಲಿಯ ಬೇಹುದು. ನಿನಗೆ ರಾಜ್ಯದ ಸಪ್ತಾಂಗಗಳಲ್ಲಿ ಮಿತ್ರರ ಕೊರತೆ ಇದೆ; ನಯದಲ್ಲಿ ನಡೆ: ಸಾಮವೆಂಬುದು ರಾಜನೀತಿಗೆ ಮನೋಹರರೂಪ. ನೀ ಪಾಂಡವರಿಗುಚಿತವಮಾಡಿ ನಾಡನು ಕೊಡುವುದು".- ಎನ್ನಲು ಕೌರವನು ಈ ಹಿತನುಡಿಗೆ ಅಡ್ಡಮೋರೆಹಾಕಿದನು. ಆಗ ಪರಶುರಾಮನು "ಕೃಷ್ಣರಾಯನು ಸಾಮಾನ್ಯನಲ್ಲ, ಅವನ-ನವಲಿಸದಿರು ಪಾಂಡವರ ವೈರವನ್ನು ಬಿಡು". ಎಂದರೆ ಕಣ್ವರು "ತಪ್ಪ ನುಡಿಯನು ಪರಶುರಾಮನು, ಅರ್ಧ ಅವನಿತಳವನು ಪಾಂಡವರಿಗೊಪ್ಪಿಸುವುದು ಉಚಿತ" —ಎನ್ದರು. ಆದರಂತೆಯೇ ವಿಶ್ವಾಮಿತ್ರಮುನಿ ನಾರದ ಮುನಿ ನುಡಿದರು. ಕೊನೆಯಲ್ಲಿ ಶ್ರೀಕೃಷ್ಣನು "ದುರ್ಯೋಧನಾ, ಈ ಮುನಿಗಳಿಗೆ ಪಕ್ಷಪಾತವಿಲ್ಲ; ಪರಾರವರಿಗರಲ್ಲ. ಅವರ ಮಾತು ಕೇಳು" ಎನ್ದನು. ಆದಕ್ಕೆ ಉತ್ತರ

ವಾಗಿ ಸುಯೋಧನನು ಆವನಿಗೆ, "ಮುರಮಥನ, ಪಾಂಡವರ ಕಥನವನೊರೆಯದಿರು: ಕರ್ಣಕ್ಕೆ ಬಾಧೆ," "ಸಂಧಿಯ ಮಾತ ಮರೆ"; ಬವರ ಬೇಕೇ? ಬೇಡಿಕೊಂಬುದು; ಅವನಿಗಿವನಿಯ ಮಾತ ನೀವಾಡುವರೇ? ಪಾಂಡವರೇಕೆ? ನಾವೇಕೆ?" ಎಂದು ಎನ್ನಲು ಕೃಷ್ಣನು "ಹಾಗೆನಬೇಡ ಪಾಂಡವರಿಗೆ ರಾಜ್ಯವನು ಇಂದ್ರಪ್ರಸ್ಥದಲಿ ಕುಳಸಹಿತ ಇತ್ತು, ಪಾಂಡವ ಪ್ರತಿಷ್ಠಾಪನಾಚಾರ್ಯ ಎಂಬ ಬಿರುದ ಪಡೆ", "ಕುಲಘಾತುಕರು" ಎಂಬಪಕೀರ್ತಿಗೆ ನೀ ನೆಲೆಯಾಗದಿರು; ನೀ ಸೋದರರ ಸಲಹು" ಎಂದು ಸಲಹೆ ಮಾಡುತ್ತಾನೆ. ಆಗ ಕೌರವನು ಎಷ್ಟು ಭೂಮಿಯೊಳರೆಯು ಬೇಡುವರೆಷ್ಟು ಬಂಧುಗಳಲ್ಲ; ಪಾಂಡವರ ಸಂಬಂಧ ನಮಗೇಕೆ?" ಎಂದು ಗರ್ಜಿಸಿದನು. ಭೀಷ್ಮರು, "ದೈವದ ಮೋಹ ತಪ್ಪಿದ ಬಳಿಕ ಸುಭಟರ ಸಾಹಸಕೆ ಹುರುಳಿಲ್ಲ; ನಂಬದಿರೆಮ್ಮ ಬಲುಹುಗಳ ಅಸುರರಿಪು ಸಾಮಾನ್ಯ ಬಲವಲ್ಲ", ಎಂದರು. ಕೊನೆಗೆ ಕೃಷ್ಣನು ಅರ್ಧರಾಜ್ಯವನ್ನು ಕೊಡದ್ದರೆ ಕುಶಸ್ಥಳ, ವೃಕಸ್ಥಳ, ವಾಸಂತಿ ವಾರಣಾವತ ಮತ್ತು ನಿನಗೆ ತಿಳಿದ ಬೇರಾವುದಾದರೂ ಒಂದು ಊರು ಹೀಗೆ ಐದೂರು ಕೊಡು ಎನ್ನಲು, ಅದಾವುದಕ್ಕೂ ಕೌರವನು ಒಪ್ಪಲಿಲ್ಲ; ಇಷ್ಟೇ ಅಲ್ಲ, ಮುಳ್ಳುಮೊನೆಯಷ್ಟು ಭೂಮಿಯನ್ನು ಕೊಡುವುದಿಲ್ಲ ಎಂದನು; ನಮ್ಮಲ್ಲಿ ವೈರವ ಬಿತ್ತಲು ಬಂದಿರುವೆಯೆಂದು ಕೃಷ್ಣನಿಗೆ ನುಡಿದನು. ಹಿರಿಯರ ಮಾತು ಕಹಿಯಾಯಿತು. ದುರ್ಯೋಧನ ದುಶ್ಯಾಸನಾದಿಗಳಾಲೋಚಿಸಿ, ಕೃಷ್ಣನನ್ನು ಕಟ್ಟಲು ಸೂಚಿಸಿದರು. ಕೌರವೇಶ್ವರನು 'ಹುರಿನೇಣುಗಳಿಂದ ತಾಪಸ ಕರವ ಬಿಗಿಯಿರಿ' ಎಂದನು. ಈ ಮಾತನ್ನು

ಕೇಳಿದ ಸಾತ್ಯಕಿಯು ಕೃತವರ್ಮನಿಗೆ, 'ವೀರಭಟರು ಕೌರವನ ನೆರೆನೆತ್ತರಲಿ ನಾದಲು ಹತ್ತಿರ ಬರಲಿ' ಎಂದು ಹೇಳಿ, ಕೃಷ್ಣನಿಗೆ "ಮಂದಮತಿ ಕೌರವರು ತಪ್ಪಿದರು, ಮನಗುಂದಲಾಗದು ದೇವ" ಎಂದರು. ಹರಿಯ ಕಟ್ಟುವುದು ಸರಿಯಲ್ಲ, ಭರತ ಕುಲಕ್ಕೇ ಕೇಡು ಎಂದು ಗಾಂಧಾರಿ, ಧೃತರಾಷ್ಟ್ರ, ಭೀಷ್ಮ, ವಿದುರ ಒಂದೇ ಸವನೆ ಹೇಳಿದರೂ ದುರ್ಯೋಧನನು ಕೇಳಲಿಲ್ಲ! ದೂತರನು ಕಟ್ಟುವುದು ರಾಯರಿಗುಚಿತವಲ್ಲ ಎಂದರೂ ಕೇಳದೇ ಹೋದನು. ವಿದುರನು ಶ್ರೀಕೃಷ್ಣನನ್ನು 'ದೇವಾಧಿದೇವನೆಂದು' ಬಣ್ಣಿಸಿದರೂ ಕೌರವನ ಕಿವಿಗೆ ಆ ಮಾತು ಕೇಳಿಸಲಿಲ್ಲ; ಆಗ ಹರಿ ಆ ಸಭೆಗೆ ತನ್ನ ವಿಶ್ವರೂಪವನ್ನೇ ತೋರಿಸಿ ಬೆರಗುಗೊಳಿಸಿದನು! ಭಕ್ತರಿಗೆಲ್ಲ ಅತ್ಯಂತ ಹರುಷವಾಯ್ತು. ಖಳರ ಕಟ್ಟಿಗೆ ಸಿಲುಕದೆ ಹಲವರು ಕೃಷ್ಣರಾಗಿ ಕೃಷ್ಣ ರಾರಾಜಿಸಿದ! ಕೌರವನು, ಕೊನೆಯಲ್ಲಿ 'ಕೃಷ್ಣನ ಕೊಂಕದಲ್ಲದೆ ಕೈವಲ್ಯವಿಲ್ಲ' ಎಂದೇ ತೀರ್ಮಾನಿಸಿ ಸಂಧಿಯನ್ನು ಬಿಸುಟ. ಅಸುರಧ್ವಂಸಿಯೂ ತನ್ನ ಮುನ್ನಿನ ಮಾನವರೂಪವನ್ನು ಧರಿಸಿ ಅಲ್ಲಿಂದ ವಿದುರನ ಮನೆಗೆ ನಡೆದು ಸಂಧಿಮುರಿದುದನ್ನೂ, ಪಾಂಡವರ ಮೇಲೆ ಕೌರವನಿಗೆ ಇರುವ ವೈರವನ್ನೂ ತಿಳಿಸಿ, "ನಿನ್ನ ಕಂದ ಕರ್ಣನನು ನೀ ಬೇಡಿಕೋ" ಎಂದು ಕುಂತೀದೇವಿಗೆ ಸೂಚಿಸಿ, ಅಲ್ಲಿಂದ ಕರ್ಣನ ಹತ್ತಿರ ಬಂದು ರಥದಲ್ಲಿ ಕುಳ್ಳಿರಿಸಿಕೊಂಡನು.

ರಥದಲ್ಲಿ ಕರ್ಣನನ್ನು ಕುಳ್ಳಿರಿಸಿಕೊಂಡು, ಅವನೊಡನೆ ಮೈದುನತನದ ಸರಸವನೆಸಗಿ, ಕರ್ಣನ ಜನ್ಮರಹಸ್ಯವನ್ನು ಅವನಿಗೆ ಹೀಗೆ ಅರುಹುತ್ತಾನೆ :

"ನಿಮ್ಮೊಳು ಯಾದವರೊಳು ಭೇದವಿಲ್ಲ, ಎಲೆ ಕರ್ಣ; ಮೇದಿನೀಪತಿ ನೀನು ಎನ್ನಾಣೆ; ನೀವರ ಭಾನುವಂಶಲಲಾಮ. ಶ್ರೀರಾಮನಿಗೆ ಸರಿಯಾದವನು" ಎನ್ನುತ್ತ ಕರ್ಣನನ್ನು ತನ್ನ ಪತ್ತಿರಕ್ಕೆ ಎಳೆದುಕೊಂಡು, ಅವನ ಕೈಯಲ್ಲಿ ಕೈಯಿಕ್ಕಿ, ಎಲೆ ದಿವಾಕರ ತನಯ,ನಿನ್ನಯ ಕುಲವನರಿಯೆ; ವೃಥಾ ದುರ್ಯೋಧನನಲಿ ಸೇವಕತನದಲಿಹುದುಚಿತವಲ್ಲ. ಕುಂತಿ ಪಡೆದೈದು ಮಂತ್ರಗಳಲ್ಲಿ ನೀನು ಮೊದಲಿಗ. ನಂತರ ಧರ್ಮ, ಭೀಮ, ಅರ್ಜುನ; ಐದನೆಯಲಿ ನಕುಲಸಹದೇವರಾದರು ಮಾದ್ರಿಯಲಿ ಒಂದು ಮಂತ್ರದಲಿ; ಪಾಂಡವರಲ್ಲಿ ಮೊದಲಿಗ ನೀನು, ಇದು ನಿನ್ನ ಜನನದ ರಹಸ್ಯ; ನಿನ್ನಭ್ಯುದಯವನೆ ಬಯಸುವೆನು; ನಿನ್ನ ತಮ್ಮಂದಿರನು ನಿನ್ನ ಪಾದಕ್ಕೆ ಕೆಡುವುತ್ತೇನೆ; ನಿನಗೆ ಪಟ್ಟಗಟ್ಟಿ ಕೌರವರು ಪಾಂಡವರು ನಿನ್ನ ಸೇವೆ ಮಾಡುವಂತೆ ಮಾಡುತ್ತೇನೆ; ಕುರುಪತಿಯು ಬಾಯ್ದಂಬುಲಕ್ಕೆ ಕೈಯೊಡ್ಡುವರೇ ? ಅವನಿಗೆ ಜೀಯಾ ಎನ್ನುವರೇ ? ನಿನಿನಗೆ ಶೌರ್ಯದಲ್ಲಿ, ಕುಲದಲ್ಲಿ ಸಮಾನರಿಲ್ಲ; ನಿನ್ನ ವೈಭವಕ್ಕೆ ಆರು ಸರಿಯೈ ಕರ್ಣ ? ನೀ ಧಾರಿಣೀಪತಿಯಾಗಿರೆ, ವೈರಕ್ಕೆ ಆಸ್ಪದವಿಲ್ಲ" ಎಂದು ಹೇಳಿದಾಗ ಕರ್ಣನಿಗೆ ಕೊರಳ ಸೆರೆ ಹಿಗ್ಗಿದವು; ಕಣ್ಣೀರು ತುಂಬಿದವು; ಕಡುನೊಂದು, "ಅಕ್ಕಟಾ ಕುರುಪತಿಗೆ ಕೇಡಾದುದು ! ಹರಿ ತನ್ನವಂಶವನರುಹಿ ಕೊಂದನು ! ಪಾಂಡವರನ್ನು ಕೊಲ್ಲಬೇಕೆಂದಿದ್ದೆ; ಆದರೆ ಅವರು ಸಹೋದರರು! ಕೊಲ್ಲದೆ ಕಾದೆನಾದರೆ ಕೌರವಂಗೆ ಅವನಿಯ ಮೊಗಲು ಸ್ಥಳವಿಲ್ಲ ! ಭೇದೋಪಾಯದಿಂದ ಶ್ರೀಕೃಷ್ಣನು ತನ್ನನ್ನು ನಾಶ ಮಾಡಿದನು" ಎಂದು ಕರ್ಣನು ಚಿಂತಾಸಮುದ್ರದಲ್ಲಿ ಮುಳುಗಿ

ದನು, ಬಾಯಿಂದ ಮಾತು ಬಾರದಾದವು. ಕೆಲಕ್ಷಣ ಮೌನ ವಹಿಸಿ, ಮೌನದಿಂದ ಎಚ್ಚೆತ್ತು ಹೇಳಿದ: "ಮರುಳು ಮಾಧವ. ಮಹಿಯ ರಾಜ್ಯದ ಸಿರಿಗೆ ಸೋಲುವನಲ್ಲ; ಹೊರೆದ ದಾತಾರಂಗೆ ಹಗೆಗಳ ಶಿರವನರಿದು ಒಪ್ಪಿಸುವೆಂಬ ಭರದೊಳಿದ್ದೆ: ಕೌರವೇಂದ್ರನ ಕೊಂದೆ ನೀ; ಪಾಂಡವರ ಒಡಹುಟ್ಟಿದವನೆಂದು ಹೇಳಿ ಅವರನ್ನು ಕೊಲ್ಲಬೇಕೆಂದಿದ್ದ ಛಲವ ಮಾಣಿಸಿದೆ; ಹೆಚ್ಚು ಮಾತನಾಡಿ ಫಲವೇನು? ಕೌರವರೊಡೆಯನಾದಂತಹೆನು! ನಿನ್ನೆಡೆಗೆ ಬಾರೆನು! ಯುದ್ಧಭೂಮಿಯಲ್ಲಿ ನಿನ್ನವರ ನಿಲಿಸು! ಕೌರವೇಶ್ವರನೊಲವು ತಪ್ಪಿಸಿ ಭುವನದೊಳಗೆನಗಾಪ್ತಜನವಿಲ್ಲ; ಕೌರವೇಂದ್ರನ ಎಂತು ಮರೆದಪೆ? ಕಾಡಲಾಗದು ಕೃಷ್ಣ, ಬಂದೆನಾದೊಡೆ ರೂಢಿ ಮೆಚ್ಚದು! ಕೌರವನ ಹಗೆಯೆ ಹಗೆ! ನಾಳೆ ಸಮರದಲಿ ತೋರುವೆನು ನಿಜಭುಜ ಶೌರಿಯದ ಸಂಪನ್ನತನವನು; ಆಹವಯಜ್ಞದೀಕ್ಷಿತನಹೆನು: ನಾಳಿನ ಭಾರತವು ಮಾರಿಗೌತಣವಾಯ್ತು! ರಣದಲಿ ಪಟುಭಟಕೋಟಿಯನು ತೀರ್ಚಿ, ಪತಿಯವಸರಕ್ಕೆ ಶರೀರವನು ನೂಂಕುವೆನು" –ಎಂದೆನ್ನಲು, ಕರ್ಣನ ದೃಢಚಿತ್ತವನ್ನು ಮೆಚ್ಚಿದ ಶ್ರೀಕೃಷ್ಣನು, "ತನಯರೈವರ ಹದನು ನಿನ್ನದು", "ಅರುಹದಿರ್ದಡೆ ಎನಗೆ ಗುಣವಲ್ಲ": "ನೀ ಕೌರವೇಂದ್ರಗೆ ಹೇಳಿ ಸಂಧಿಮಾಡಿಸು; ನಿನ್ನ ಮಾತನ್ನು ಆವನು ಕೇಳುತ್ತಾನೆ" ಎನ್ನಲು ಕರ್ಣನು "ಮಂತ್ರವನೆಸಲಾಗದು. ತನ್ನ ವೀರಕೆ ಮಸುಳಹುದು! ಸಂಧಿಯನರಿಯೆ ಮುರವೈರಿ" ಎಂದುತ್ತರಿಸಲು –ಕೃಷ್ಣನು ನಿರುಪಾಯನಾದ ಮನೆಗೆ ಹೋದ ಕರ್ಣನು, "ಈ ಗೋಪಾಲ ಬರಿದೇ ಬಿಡನು. ಜೀವವ ಕೊಳ್ಳದಿರನು" ಎಂದು ಚಿಂತಾಕ್ರಾಂತನಾದನು!

ಕರ್ಣನು ಒಂದು ರವಿವಾರ ಭಾಗೀರಥಿಯ ತೀರದಲ್ಲಿ ಸೂರ್ಯನಿಗೆ ಅರ್ಘ್ಯವನು ಕೊಡುತ ಸೌರಮಂತ್ರವ ಜಪಿಸುತ್ತಿ ವಾಗ, ಔದಾರ್ಯದ ಸುರತರುವ ಕಾಣಲು ಕುಂತಿದೇವಿ ಆಗಮಿಸಿ ದಳು. ಕರ್ಣನು ಆಕೆಯನ್ನು ಕಂಡೊಡನೆ ಪಾದಗಳಿಗೆ ಅಡ್ಡ ಬೀಳಲು, ಅವನನ್ನು ಎತ್ತಿದಳು; ಆಕೆಗೆ ಕಣ್ಣೀರುದುರಿದವು. ಆ ಸಮಯದಲ್ಲೇ ಗಂಗಾಮಾತೆ ರವಿಸುತನನ್ನು ಕುಂತೀಮಾತೆಗೆ ಒಪ್ಪಿಸಿದಳು. ಸೂರ್ಯದೇವನು ಕರ್ಣನನ್ನು ಏಕಾಂತಕ್ಕೆ ಕರೆದು ಆತನ ಕರ್ಣದಲ್ಲಿ "ಕುಂತೀದೇವಿ ನಿನಗೆ ತಾಯಿ ನಿಜ; ಮುರಹರನ ಮತದಿಂದ ನಿನ್ನಯ ಸರಳಬೇಡಲು ಬಂದಳು; ಹರಿಗೆ ಕವಚ ವನಿತ್ತಂತೆ ಮರುಳಾಗಬೇಡ." ಎಂದೆನಲು, 'ಹಸಾದ'ವೆಂದನು ಕರ್ಣ ತಾಯಿಗೆ ಬಂದ ಕಾರಣವನ್ನು ಕೇಳಿದನು. ಅದಕ್ಕೆ ಕುಂತಿಯು ಶೋಕಿಸುತ್ತ, "ಮಗನೆ, ತಮ್ಮಂದಿರನು ಪಾಲಿಸು; ವಿಗಡತನವನು ಮಾಣು; ಪರರೋಲಗವ ನೀ ಮಾಡುವರೇ ? ನಿನಗಿತ್ತಂಡ ಅನುಜರು; ಹಿಸುಣರ ಹಗೆನುಡಿಯ ಕೇಳದಿರು; ಪಟ್ಟವ ಬಿಗಿಸಿಕೋ; ಸಲಿಸೆನ್ನ ವಚನವ" ಎಂದೆನ್ನಲು, ಕರ್ಣನು, "ತಾಯಹುದು ನಿಜ; ನಾ ಬಲ್ಲೆ; ಶ್ರೀಕೃಷ್ಣನು ಹೇಳಿದುದರಿಂದ ತಿಳಿದೆನು. ಕೌರವರಾಯನೆನ್ನನು ನಚ್ಚಿ ಹೊರೆದನು; ಸಾಯ ಲಳಕುವೆನೇ ? ಸುಡು ಏತರದೀ ಇಳೆಯ ಬಾಳಿಕೆ; ಕೃತಘ್ನರಿಗಿಲ್ಲ ಗತಿ ಧಾರುಣಿಯ ಬಯಸುವರೆ ತಕ್ಕುದೇ ? ಹೇಸಳೇ ಜಯಲಕ್ಷ್ಮಿ ? –ಪಾಂಡವರೊಡನೆ ಕೂಡಿದಡಿಂದು ಲೋಕವು ನಗದೇ ? ಬಂದ ಕಾರ್ಯವ ಬೆಸಸಿ" ಎಂದುತ್ತರಿಸುತ್ತಾನೆ. ಅದಕ್ಕೆ ಕುಂತಿದೇವಿಯು :

"ಐವರು ಮಕ್ಕಳನು ತಲೆಗಾದು ತೋರ್ಪೆ ಕಂದ:
ನಿನಗೇನೀದುರಾಗ್ರಹವೊಪ್ಪುವುದೇ ಕೌರವನ ಸೇವೆಯಲಿ?
ಹೋದ ಬಾಣವ ಮರಳಿ ತೊಡದಿರು;

ವೈರವ ಮಾದು ಕಳೆ;"—ಎಂದು ಕೇಳಿದುದಕ್ಕೆ ಕರ್ಣನು 'ಹಸಾದ'ವೆಂದನು. ತಾಯಿಯನ್ನು ಬೀಳ್ಕೊಂಡು ಅರಮನೆಗೆ ನಡೆದನು —ಇದು ಉದ್ಯೋಗ ಪರ್ವದ ಕಥಾಸಾರ. ಇನ್ನು ಇದರ ವಿಮರ್ಶೆ.

ಕೃಷ್ಣ ಸಂಧಾನ ಸನ್ನಿವೇಶದ ಕಥಾಕೌಶಲ್ಯ

ಇದನ್ನು ಉದ್ಯೋಗ ಪರ್ವವೆಂದು ಮೂಲದಲ್ಲಿ ಹೆಸರಿಸಲಾಗಿದ್ದರೂ, ಇಲ್ಲಿಯ ಕಥಾವಿಸ್ತರವನ್ನು ನೋಡಿದಾಗ ಇದನ್ನು ಶ್ರೀಕೃಷ್ಣ ಸಂಧಾನ ಎಂದೇ ಕರೆಯುವುದು ಸೂಕ್ತವೆನಿಸುತ್ತದೆ. ಹತ್ತು ಸಂಧಿಗಳಲ್ಲಿ ಈ ಪರ್ವವು ಹಬ್ಬಿದ್ದರೂ ಈ ಪರ್ವದಲ್ಲಿ ವಿಶೇಷವಾಗಿ ರಾಜಕೀಯ ಚಟುವಟಿಕೆಗಳ ಸನ್ನಿವೇಶಗಳ ವಿವರಗಳೇ ಹೆಚ್ಚಾಗಿ, ಅಲ್ಲಲ್ಲಿ (ವಿದುರನ ಪ್ರಸಂಗದಲ್ಲಿ) ಭಕ್ತಿಯ ಸನ್ನಿವೇಶದ ವಿವರಗಳೂ ಬಂದಿವೆ; ಅಲ್ಲದೆ ನೀತಿಯೂ ಇಲ್ಲಿ ಪ್ರತಿಪಾದಿತವಾಗಿದೆ. ಈ ನೀತಿಯಲ್ಲಿ ವ್ಯವಹಾರನೀತಿ, ರಾಜಕೀಯ ನೀತಿ, ಸಾಮಾಜಿಕ ನೀತಿಗಳು ಬಂದಿವೆ. ಆದುದರಿಂದ ಭಕ್ತಿ, ನೀತಿ, ರಾಜಕೀಯ, ಈ ಮೂರು ತತ್ವಗಳ ಮುಪ್ಪುರಿಯನ್ನು ಈ ಉದ್ಯೋಗಪರ್ವ ಬಿತ್ತರಿಸುತ್ತದೆ. ನೀತಿ ಮತ್ತು ಭಕ್ತಿಗಳು ಇಲ್ಲಿ ರಾಜಕೀಯ ವ್ಯವಹಾರಕ್ಕೆ ಸಂಬಂಧಿಸಿಯೆ ಬಂದಿವೆಯಾದುದರಿಂದ ರಾಜನೀತಿಯೇ ಇಲ್ಲಿ ಪ್ರಧಾನವಾಗಿದೆಯೆನ್ನಬಹುದು.

ಕಥೆ ಆರಂಭವಾಗುವುದು ಅಭಿಮನ್ಯುವಿನ ಮದುವೆಗಾಗಿ ಬಂದ ಪಾಂಡವರ ಬಂಧುಗಳು, ಮಿತ್ರರು, ಹಿತೈಷಿಗಳು ಕೂಡಿದ ಶುಭಸಂದರ್ಭದಿಂದ. ಈ ಸಮಾರಂಭಗಳು ಬಂಧುಗಳೆಲ್ಲರೂ ಒಂದೆಡೆ ಕೂಡುವ, ಕೂಡಿ ಸುಖ–ದುಃಖಗಳನ್ನು ಹಂಚಿಕೊಳ್ಳುವ ಅವಕಾಶವನ್ನು ಒದಗಿಸುತ್ತವೆ. ವಿರಾಟರಾಜನು, ಪಾಂಡವರು

ತಮಗೆ ಸಹಾಯಮಾಡಿದುದರ ದ್ಯೋತಕವಾಗಿ ಉತ್ತರೆಯನ್ನು ಅಭಿಮನ್ಯುವಿಗೆ ಕೊಡುತ್ತಾನೆ. ಇದರಿಂದ ಪಾಂಡವರ ರಾಜಕೀಯಕ್ಕೆ ಹೊಸ ತಿರುವು ಪ್ರಾಪ್ತವಾಗುತ್ತದೆ. ಪಾಂಡವರಿಗೆ ತಮ್ಮ ವ್ಯವಹಾರ ನಡೆಸಲು ವಿರಾಟರಾಜನು 'ಉಪಪ್ಲಾವ' ನಗರವನ್ನೇ ಕೊಡುತ್ತಾನೆ. ದ್ರೌಪದಿಯ ಮದುವೆಯಿಂದ ಪಾಂಚಾಲರು, ಸುಭದ್ರೆಯ ಮದುವೆಯಿಂದ ಯಾದವರು, ಉತ್ತರೆಯ ಮದುವೆ ಯಿಂದ ವಿರಾಟರು –ಇವರೆಲ್ಲರೂ ಪಾಂಡವರಿಗೆ ಅತಿಹತ್ತಿರದ ಸಂಬಂಧಿಗಳೂ, ಪ್ರಿಯರೂ ಆಗಿ, ಅವರಿಗೆ ಅವರ ರಾಜ್ಯ ಕೊಡಿಸಲು ತುಂಬಾ ನೆರವಾಗುತ್ತಾರೆ. ಇದರಿಂದ ನೆಲೆಗೆಟ್ಟ ಪಾಂಡವರಿಗೆ ಒಂದು ನೆಲೆ ದೊರಕಿದಂತಾಗುತ್ತದೆ. ರಾಜರು ಈ ರೀತಿಯ ಶರೀರ ಸಂಬಂಧಗಳಿಂದ ಒಂದು ಸುಭದ್ರ ಸ್ಥಿತಿಗೇರು ತ್ತಿದ್ದರು.

ತಮ್ಮ ಸ್ಥಿತಿಗತಿಗಳ ವಿವರಣೆಗಾಗಿಯೆ ಉಪಪ್ಲಾವ ನಗರ ದಲ್ಲಿ ತನ್ನೆಲ್ಲ ಬಂಧುಗಳಿರುವಾಗ ಧರ್ಮರಾಜನು ಒಂದು ಚಿಕ್ಕ ಸಭೆ ಕರೆಯುತ್ತಾನೆ. ಆಗ ಶ್ರೀಕೃಷ್ಣನೇ ಮುಂದಾಗಿ ವನವಾಸ, ಅಜ್ಞಾತವಾಸಗಳಿಂದ ನವೆದ, ನೊಂದ ಪಾಂಡವರಿಗೆ ಮುಂದಿನ ರಾಜಕೀಯ ಸ್ಥಿತಿಯೇನು ಎನ್ನುತ್ತಾನೆ. ಆಗ ದ್ರುಪದನು, "ದೇವ ನಿನ್ನನ್ನೇ ನಂಬಿರುವ ಪಾಂಡವರನ್ನು ಕಾಪಾಡುವ ಭಾರ ನಿನ್ನದು; ನಮ್ಮದು ನಿನ್ನ ಅಜ್ಞೆಯನ್ನು ತಲೆಯಲ್ಲಿ ಹೊತ್ತು ನಡೆವುದು ಮಾತ್ರ –ಎಂದೆನ್ನಲು, ಶ್ರೀಕೃಷ್ಣನು ಮೊದಲು ಭೀಷ್ಮಾದಿ ಗಳಲ್ಲಿಗೆ ದೂತರನ್ನು ಕಳಿಸಿ ಸಾಮವನ್ನು ಬಳಸುವುದು; ಅವಕ್ಕೊಪ್ಪದಿದ್ದರೆ ದಂಡವನ್ನು ಎತ್ತುವುದು ಎಂದು ಸೂಚಿಸು

ತ್ತಾನೆ. ಬಲರಾಮನು ಇದನ್ನು ಒಪ್ಪದೆ ಪಾಂಡವರು ಯುದ್ಧದಲ್ಲಿ ತಮ್ಮರಾಜ್ಯ ಪಡೆಯಲಿ ಎನ್ನುತ್ತಾನೆ. ಈ ರೀತಿ ೧) ಸಂಧಾನದ ಮೊದಲು ೨) ಸಂಧಾನ, ಮತ್ತು ೩) ಸಂಧಾನದ ನಂತರ ಎಂದು ಈ ಕೃಷ್ಣಸಂಧಾನದ ಸನ್ನಿವೇಶವನ್ನು ಮೂರು ಭಾಗಗಳಲ್ಲಿ ವಿಭಾಗಿಸಬಹುದು. ಸಾಮೋಪಾಯದ ವಿವರಗಳು ಸಂಧಾನದ ಪೂರ್ವಭಾವೀ ವಿಷಯಕ್ಕೇ ಸಂಬಂಧಿಸಿವೆ. ಸಂಧಾನದ ಪೂರ್ವದಲ್ಲಿ ಕೃಷ್ಣನಿಗೂ ಪಾಂಡವರಿಗೂ ಯುದ್ಧವು ಅನಿವಾರ್ಯ ಎಂದು ತಿಳಿದು, ಮೊದಲು ಮಿತ್ರರಾಜರಿಗೆಲ್ಲ ಸಹಾಯ ಮಾಡಲು ಬರೆದು ಯುದ್ಧಕ್ಕೆ ಸನ್ನದ್ಧರಾಗಿ ಅವರು ಬರುವಂತೆ ತಿಳಿಸಬೇಕೆಂದು ಹೇಳಿ ಪಾಂಡವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿದವನೂ ಶ್ರೀಕೃಷ್ಣನೇ. ನಿಮ್ಮ ರಾಜಕಾರ್ಯದ ಸ್ಥಿತಿಗತಿಗಳನ್ನು ತಿಳಿದು ಕರೆಸಿದಾಗ ಬರುತ್ತೇನೆಂದು ಹೇಳಿ ದ್ವಾರಕೆಗೆ ಅವನು ಹೋಗುತ್ತಾನೆ.

ರಾಜಕೀಯದಲ್ಲಿ ಚತುರೋಪಾಯಗಳನ್ನು ಬಳಸಬೇಕೆಂದು ಸಾಮಾನ್ಯ ನಿಯಮ. ಅದರಲ್ಲಿಯೂ ಸಾಮೋಪಾಯಕ್ಕೆ ಕೆಲವೊಂದು ವೇಳೆ ಹಿಡಿಯುವುದರಿಂದ ಯುದ್ಧದ ಸಿದ್ಧತೆ ಮಾಡಲು ಸಮಯ ಸಿಗುತ್ತದೆ. ದ್ರುಪದನ ಅಭಿಪ್ರಾಯದಂತೆ ಅವನು ತನ್ನ ಪುರೋಹಿತನನ್ನು ಕೌರವನ ಆಸ್ಥಾನಕ್ಕೆ ಪಾಂಡವರ ರಾಜ್ಯಬೇಡಲು ಕಳಿಸಿದುದು: ಪಾಂಡವರು ರಾಜರುಗಳಿಗೆ ಓಲೆ ಬರೆದುದು, ಕೆಲವರು ಪತ್ರಗಳನ್ನು ಮನ್ನಿಸಿ ಸೈನ್ಯಸಹಿತ ಸಹಾಯಕ್ಕೆ ಧಾವಿಸಿದುದು –ರಾಜಕೀಯದ ಬೆಳವಣಿಗೆಯೇ. "ಶತ್ರುಗಳು ಬಲಿಷ್ಠರಾಗುತ್ತಿದ್ದಾರೆ" ಎಂಬ ಭಾವನೆ ದುರ್ಯೋಧನನಿಗೆ

ಬಂದು, ಕೃಷ್ಣನನ್ನು "ಒಳಗುಮಾಡಿಕೊಳ್ಳಲು" ಅವನು ದ್ವಾರಕೆಗೆ ತೆರಳಿದುದು. ಗೂಢಚಾರರಿಂದ ಈ ಸುದ್ದಿಯನ್ನು ತಕ್ಷಣ ತಿಳಿದ ಧರ್ಮರಾಯನು ಅರ್ಜುನನನ್ನು ದ್ವಾರಾವತಿಗೆ ಕಳಿಸಿದುದು— ಇವೆಲ್ಲ ಕೃಷ್ಣ ಸಂಧಾನಕ್ಕೆ ಸಂಬಂಧಿಸಿದ ಪೂರ್ವಭಾವೀ ಘಟನೆಗಳು ಅಂದು ಕುರುಪಾಂಡವರು ಇಟ್ಟಿದ್ದ ಗೂಢಚಾರರ ಚಾಕಚಕ್ಯತೆ ಅವರ ನಿಷ್ಠೆ ಮೆಚ್ಚುವಂತಹವು. ಯಾವುದೇ ದೇಶದಲ್ಲಿ ಸುಭದ್ರ ಸ್ಥಿತಿ ಇರಬೇಕಾದರೆ ಆ ದೇಶದ ರಕ್ಷಣೆ ಬಲವಾಗಿರಬೇಕು. ವೈರಿಗಳ ಮೇಲೆ ಸದಾ ಕಣ್ಣಿರಿಸಿರಬೇಕು. ಇಂತಹ ವ್ಯವಸ್ಥೆಯನ್ನು ಈ ಭಾರತದಲ್ಲಿ ಕಾಣುತ್ತೇವೆ. ದ್ವಾರಕೆಗೆ ದುರ್ಯೋಧನ, ಅರ್ಜುನ ಇಬ್ಬರೂ ಬಂದ ಕಾಲದಲ್ಲಿ ಅರ್ಜುನ ಕೇಳಿದ್ದು ಶ್ರೀಕೃಷ್ಣನನ್ನು ಮಾತ್ರ. ಆತನನ್ನು ಧರ್ಮಜ, ಅರ್ಜುನ, ಭೀಷ್ಮ, ದ್ರೋಣಾದಿಗಳೆಲ್ಲ 'ನಾರಾಯಣ' ಎಂದರೆ—ಅತಿ ಮಾನುಷ ಎಂದೇ ನಂಬಿದ್ದರು. ದುರ್ಯೋಧನನು ಮಾತ್ರ ಬಲವನ್ನು ನಂಬಿದ್ದನು.* ದೈವಬಲದ ಮುಂದೆ ಯಾವ ಬಲವೂ ಸಮವಲ್ಲವೆಂಬುದನ್ನು ಪಾಂಡವರು ಅರಿತಿದ್ದರು. ಮದೋನ್ಮತ್ತ ರಾದವರಿಗೆ ಯಾರ ಉಪದೇಶವೂ ಹಿಡಿಸುವುದಿಲ್ಲ. ಅವರಂತೆ ದುರ್ಯೋಧನನಿಗೆ ದ್ವಾರಕೆಯಲ್ಲಿ ಶ್ರೀಕೃಷ್ಣನು ಮಾಡಿದ ಉಪ ದೇಶ ರುಚಿಸಲಿಲ್ಲ. ಅರ್ಜುನನು ಶ್ರೀಕೃಷ್ಣನಿಗೆ "ನಾವು ನಿಮ್ಮ ಭಕ್ತರು; ನೀವು ಭಕ್ತರ ಭೃತ್ಯರು. ಸಾರಥಿಯಾಗಿ ನಮ್ಮನ್ನು ಕಾಪಾಡಬೇಕು" ಎಂದುದಕ್ಕೇ ಕೃಷ್ಣನು ಅರ್ಜುನನ ಸಾರಥಿತನವ

---

* ಜೀವನ ರಥಕ್ಕೆ ದೈವ ಸಾರಥಿಯಾದರೆ ರಥ ಉರುಳುವುದಿಲ್ಲ ಎಂಬು ದಕ್ಕೆ ಇದು ಸಂಕೇತವೂ ಅಹುದು.

ಕೈಕೊಂಡನು. ಪಾಂಡವರತ್ತ ಶಲ್ಯನು ಸೈನ್ಯ ಸಮೇತ ಹೊರಟು ದುದನ್ನು ತಿಳಿದ ದುರ್ಯೋಧನನು ಅವನ ಸೈನ್ಯಕ್ಕೆ ಬಿಡಾರ ಮತ್ತು ಊಟದ ವ್ಯವಸ್ಥೆ ಮಾಡಿದುದು ರಾಜಕೀಯದ ದೃಷ್ಟಿ ಯಿಂದ ಅತಿ ಮಹತ್ವದ್ದು. 'ನೀವು ನನಗೆ ಬೆಂಬಲವಾಗಿ ಹಸ್ತಿನಾಪುರಕ್ಕೆ ಮರಳಿ' ಎಂದುದನ್ನು ಶಲ್ಯನು ಮನ್ನಿಸಿದನು. ಆದರೂ ಬಂಧುದರ್ಶನಕ್ಕೆಂದು ಉಪಪ್ಲಾವ್ಯನಗರಿಗೆ ಬಂದು ನಡೆದ ಸಂಗತಿ ವಿವರಿಸಿದನು. ಶಲ್ಯನನ್ನು ಗೌರವಿಸಿದ ಪಾಂಡವರು ಅವನಿಂದ ಲಾಭವನ್ನೇ ಪಡೆದರು. ದ್ರುಪದನ ಪುರೋಹಿತನು ಕೌರವನ ಬಳಿಗೆ ಬಂದುದು, ಅದಕ್ಕೆ ಉತ್ತರ ತಿಳಿಸಲು ಕೌರವರ ಪರವಾಗಿ ಸಂಜಯು ಬಂದುದು –ಇವೆಲ್ಲ ಮಾತುಕತೆಗಳ ಹಂತವು ಸಂಧಾನದ ಪೂರ್ವಭಾವಿ ಚಟುವಟಿಕೆಗಳನ್ನೇ ಸೂಚಿಸುತ್ತವೆ. ಸಂಜಯು ಬಂದಾಗ ಧರ್ಮರಾಜನು ಸಭೆ ಕರೆದುದು, ದ್ರುಪದನ ಪುರೋಹಿತ ಬಂದಾಗ ದುರ್ಯೋಧನ ಸಭೆ ಕರೆದುದು ಮೂಲ ಸಂಧಾನದ ಕಥಾಸನ್ನಿವೇಶಕ್ಕೆ ಪೂರಕವಾಗಿವೆ. ಈ ಎರಡೂ ಸಭೆಗಳಲ್ಲಿ ನಡೆದ ವೀರೋಚಿತ ಮಾತುಗಳು ಮುಂದಿನ ಕಥಾ ವಿವರಕ್ಕೆ ಬಿತ್ತಿದ ಬೀಜವಾಗಿವೆ. ದೂತರು ಬಂದಾಗ ರಾಜ ರಾದವರು ಹೇಗೆ ನಡೆದುಕೊಳ್ಳಬೇಕೆಂಬುದುನ್ನೂ ಈ ಸಭೆ ಗಳು ಎತ್ತಿತೋರಿಸುತ್ತವೆ. ಸುಜಯುನನ್ನು ಅರಿತ ಪಾಂಡವರು ಆತನನ್ನು ಅತ್ಯಂತ ಗೌರವದಿಂದ ಕಂಡು, ಸವಿಮಾತು, ಸವಿ ಯೂಟ, ಕನಕಾಭರಣ, ಉಡುಗೊರೆಗಳಿಂದ ಸತ್ಕರಿಸಿದುದು ಅವರ ರಾಜಕೀಯ ಪ್ರಜ್ಞೆಗೆ ಸಾಕ್ಷಿಯಾಗಿದೆ. ಸಂಜಯನು ಪಾಂಡವರ ಕಡೆಯಿಂದ ಮರಳಿದುದನ್ನು ತಿಳಿದು ಧೃತರಾಷ್ಟ್ರನು ನಿದ್ರೆಬಾರದೆ,

ಚಿಂತೆಗೀಡಾಗಿ, ವಿದುರನನ್ನು ಕರೆಯಿಸಿ, ನೀತಿಯ ಮಾತುಗಳನ್ನು ಕೇಳಿದ್ದು, ಪಾಂಡವರ ಹಿರಿಮೆಗಳನ್ನು, ಕೃಷ್ಣನ ಸಹಾಯವನ್ನು ತಿಳಿದಮೇಲೆಯೇ. ಯಾವುದೇ ರಾಜನು ನೀತಿ ತಪ್ಪಿನಡೆದರೆ ರಾಜ್ಯಕ್ಕೇ ಕೇಡು ಎಂಬುದನ್ನು ತಿಳಿಸಿಕೊಡುವುದಕ್ಕಾಗಿಯೇ ಈ ಸನ್ನಿವೇಶ ಬಂದಂತಿದೆ. ರಾಜ್ಯದ ಆಡಳಿತಕ್ಕೂ ರಾಜಕಾರಣಕ್ಕೂ ನೀತಿಯೇ ನೆಲೆಗಟ್ಟು ಎಂಬುದನ್ನು ಈ ಭಾಗವು ದೀರ್ಘವಾಗಿ ವಿವರಿಸುತ್ತದೆ.ಅಲ್ಲದೆ ವಿದುರನು ಎಂತಹ ನೀತಿಶಾಸ್ತ್ರಜ್ಞನೂ ಕೃಷ್ಣನ ಪರಮಭಕ್ತನೂ ಆಗಿದ್ದನೆಂಬುದನ್ನೂ ಕವಿಗೆ ತಿಳಿಸಬೇಕಾಗಿದೆ. ಇಂತಹವಿದ್ವಾಂಸ,ಅನುಭವಿ ಹಿರಿಯನಾದವನೊಬ್ಬನನ್ನು ಬಹಿರಂಗ ಸಭೆಯಲ್ಲಿ ದುರ್ಯೋಧನನು 'ಭಂಡ' ಎಂದು ಬೈದುದನ್ನು ನೋಡಿದರೆ, ಅವನೆಂತಹ ಅವಿವೇಕಿ ಎಂಬುದು ಸ್ಪಷ್ಟವಾಗುತ್ತದೆ. ಐಶ್ವರ್ಯ, ಯೌವನ, ದೇಹ, ಸ್ಥಿರವಲ್ಲ. ರಾಜನಾದವರು ನೀತಿ, ಧರ್ಮಗಳಿಂದ ರಾಜ್ಯವನ್ನು ಪಾಲಿಸುವುದೇ ರಾಜನೀತಿ ಎನ್ನುತ್ತಾನೆ ವಿದುರ. ದೂತನಾಗಿ ಪಾಂಡವರ ಬಳಿಗೆ ಬಂದು, ನಂತರ ಕೌರವಸಭೆಯಲ್ಲಿ ಪಾಂಡವರಾಡಿದುದನ್ನು ವರದಿಮಾಡಿದ ಸಂಜಯಯನನ್ನು 'ಸೂಕಾಚಿ' 'ಇವನು ಜಗದ ಭಂಡ' ಎಂದು ಕರ್ಣ ಗರ್ಜಿಸಿದುದು, ಆ ಹಿರಿಯಸ್ವಾಮಿಭಕ್ತನ ಮನಸ್ಸಿನಲ್ಲಿ ಎಂತಹ ಕಹಿ ಭಾವನೆಯನ್ನುಂಟುಮಾಡಿರಬೇಕು ? ಇದೆಲ್ಲ ಆ ಕೃಷ್ಣನ ಕಾರಸ್ಥಾನದ ಪರಿಣಾಮವಲ್ಲವೇ ? ದ್ರೋಣ, ಭೀಷ್ಮರು ಮೇಲಿಂದ ಮೇಲೆ ಸಂಧಿಗೆ ಸಲಹೆ ಮಾಡಿದರು. ಅದಕ್ಕೆ ದುರ್ಯೋಧನನು, "ಡಿಂಬ ನಮ್ಮಲ್ಲಿ ಜೀವ ಪಾಂಡವರಲ್ಲಿ"—ಎಂದು ಅವರನ್ನು ಮೂದಲಿಸಿದನು.

ಕೌರವರ ನಿರ್ಣಯ ತಿಳಿದಮೇಲೆ ಪಾಂಡವರು ಕೃಷ್ಣನನ್ನು ಸಂಧಾನಕ್ಕೆ ಕಳಿಸಲು ನಿರ್ಧರಿಸಿದರು. ಸಂಧಾನಕ್ಕೆ ತೆರಳುವ ಮೊದಲು ಶ್ರೀಕೃಷ್ಣನು ಪಾಂಡವರೈವರನ್ನೂ, ದ್ರೌಪದಿಯನ್ನೂ ಕರೆದು 'ನಿಮ್ಮ ನಿಮ್ಮ ಅಭಿಪ್ರಾಯ ಹೇಳಿರಿ' ಎನ್ನುತ್ತಾನೆ. ಅದರಲ್ಲಿ ಏಕಾಭಿಪ್ರಾಯವಿರಲಿಲ್ಲ. ಭೀಮ, ಸಹದೇವ, ದ್ರೌಪದಿ ಇವರಿಗೆ 'ಸಮರವೇ' ಬೇಕಾಗಿತ್ತು. ಕೃಷ್ಣನೂ ಕೊನೆಗೆ 'ಕಾಳಗವನೇ ಒಲಿದು ಬಹೆ'(ಕಾಳಗವನೇ ಒಲಿದು ಬಹೆ?) ಎಂದು ಹೇಳಿದುದು ಅವನ ಒಲವೂ ಸಮರಕ್ಕೆಯೇ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಸ್ತಿನಾವತಿಗೆ ಹೊರಡುವ ಮುನ್ನವೇ ಯುದ್ಧದ ಬಗೆಗೆ ತೀರ್ಮಾನ ತೆಗೆದುಕೊಂಡಂತಿತ್ತು. ಆದರೂ 'ಕಪಟ ನಾಟಕ ಸೂತ್ರಧಾರಿ' ಎನಿಸಿದ ಕೃಷ್ಣ, ಅಲ್ಲಿಗೆ ಹೋಗದೇ ಬಿಡಲಿಲ್ಲ. ಹಿರಿಯರೆದುರು ಸಂಧಿಗೆ ಒತ್ತಾಯಿಸದೇ ಇರಲಿಲ್ಲ. ಸಂಧಿಗೆ ಒಪ್ಪಿದಗೆ ಭೂಭಾರ ಕಡಿಮೆ ಮಾಡುವುದು ಹೇಗೆ ಎಂದೂ, ಏನಾದರೂ ಅವಗಡ ಸಂಭವಿಸಿದರೆ ಹೇಗೆಂದು ಯೋಚಿಸಿ, ಸೈನ್ಯ, ಶಸ್ತ್ರ, ಅಸ್ತ್ರ ಸಮೇತ ಮಂಗಳ ಸುಸಮಯದಲ್ಲಿ ಹರಿ, ಸಂಧಾನಕ್ಕೆ ಹಸ್ತಿನಾವತಿಗೆ ನಡೆದನು; ದಾರಿಯಲ್ಲಿ ಶುಭ ಶಕುನ ಕಂಡನು. ಮುಂದೆ ಗೌತಮ, ಕಣ್ವ, ಕೌಶಿಕಾದಿ ಮುನಿಗಳ ದರ್ಶನ ಪಡೆದು, ಉಪಚರಿಸಿ ಅವರಿಗೂ ಹಸ್ತಿನಾವತಿಗೆ ಬರಲು ತಿಳಿಸಿದನು. ಇದು ಅವನ ಲೌಕಿಕ ಚಾತುರ್ಯವನ್ನು ತೋರಿಸುತ್ತದೆ. ಹಸ್ತಿನಾವತಿಗೆ ಬಂದು ದೂತರಿಂದ ತಾನು ಬಂದಿರುವ ಸುದ್ದಿಯನ್ನು ದುರ್ಯೋಧನನಿಗೆ ತಲುಪಿಸಿದನು. ಧೃತರಾಷ್ಟ್ರನಿಗೂ ವಿದುರನಿಗೂ ಸುದ್ದಿಹೋದೊಡನೆ ಅವರು ಕೃಷ್ಣನನ್ನು ಗೌರವದಿಂದ

ಬರಮಾಡಿಕೊಂಡರು. ಕೃಷ್ಣನು ಧೃತರಾಷ್ಟ್ರನ ಅರಮನೆಗೆ ಹೋಗಿ ಕುಶಲಸಮಾಚಾರದ ಮಾತನಾಡಿ, ಉಳಿದವರನ್ನು ಸನ್ನೆಮಾಡಿ ಅವರವರ ಬಿಡಾರಕ್ಕೆ ಕಳಿಸಿ, ಕೌರವನ ಮನೆಯನ್ನು ದಾಟಿ ವಿದುರನ ಮನೆಗೇ ಹೊರಟನು. ಇದರಿಂದ ದುರ್ಯೋಧನನ ಕೋಪ ಅಟ್ಟಕ್ಕೇರುವುದು ಸ್ವಾಭಾವಿಕವಲ್ಲವೇ? ರಾಜದೌತ್ಯಕ್ಕೆ ಹೊರಟ ಕೃಷ್ಣನು ರಾಜರ ಅರಮನೆಯಲ್ಲಿ ಅತಿಥಿಯಾಗಿರಬೇಕಾದುದು ಸ್ವಾಭಾವಿಕ, ಆದರೆ ಅವನು ಹಾಗೆಮಾಡದೆ ವಿದುರನ ಮನೆಯಲ್ಲಿ ಉಳಿದುದು ದುರ್ಯೋಧನ ಕೋಪ ಹೆಚ್ಚಾಗುವುದಕ್ಕೆ ಸಹಜವಾಗಿಯೇ ಕಾರಣವಾಯಿತು. ಅದು ಕೃಷ್ಣನ ಉದ್ದೇಶವೂ ಆಗಿತ್ತು. ಹೇಗಾದರೂ ಮಾಡಿ ದುರ್ಯೋಧನನನ್ನು ಕೋಪಿಷ್ಠನನ್ನಾಗಿ ಮಾಡಿ, ಸಂಧಿಯ ಮಾತು ತಾನೇ ಮುರಿದು ಬೀಳುವಂತೆ ಮಾಡುವುದಕ್ಕೆಂದೇ. ಅದು ಕೃಷ್ಣನು ಹೂಡಿದ ನಾಟಕವಾಗಿತ್ತು.

ಭಕ್ತವತ್ಸಲ ಕೃಷ್ಣ : ಭಗವಂತನು 'ಭಕ್ತಪ್ರಿಯ'ವೆಂಬುದನ್ನು ಸೂಚಿಸಲು ಶ್ರೀಹರಿಯು ಭೀಷ್ಮ, ದ್ರೋಣಾದಿಗಳು ತನ್ನ ಭಕ್ತರಿದ್ದೂ, ವಿದುರನ ಮನೆಗೆ ನಡೆದುದು ಅತ್ಯಂತ ಮಹತ್ವದ ಸಂಗತಿ. ದುರ್ಯೋಧನ, ಧೃತರಾಷ್ಟ್ರರು ತಮ್ಮ ತಮ್ಮ ಅರಮನೆಗಳಲ್ಲಿ ಕೃಷ್ಣ ಬರುವನೆಂದು ಸವಿಸವಿ ಪಕ್ವಾನ್ನಗಳನ್ನು ತಯಾರಿಸುವಂತೆ ಏರ್ಪಾಡು ಮಾಡಿದ್ದರೂ, ಆ ರಾಜಾನ್ನಕ್ಕೊಲಿಯದೆ, ವಿದುರನ ಮನೆಯ ಒಕ್ಕುಡಿತೆ ಹಾಲಿಗೆ ಹಸಿದು ಅಲ್ಲಿಗೆ ಹೋದುದು ಊಟದ ಹಸಿವಿನಿಂದಲ್ಲ, ಭಕ್ತಿಯ ಇನಿದಾದ ಭಾವಕ್ಕೆ; ಭಕ್ತಿಯ ಇನಿಮಾತುಗಳಿಗೆ. ಶೂದ್ರನಾಗಿದ್ದರೂ ಕುಲಜಾತಿಗಳ ಭೇದಗಳನ್ನೆಣಿಸದ ಶ್ರೀಕೃಷ್ಣ, ವಿದುರನ ಬಿಡಾರಕ್ಕೆ ತೆರಳಿದ್ದು ಭಕ್ತಿಯ ಮುಂದೆ ಕುಲ-

ಜಾತಿಗಳು ದೇವನನ್ನು ಆಕರ್ಷಿಸವು ಎಂಬ ತತ್ತ್ವವನ್ನು ಸಾರುವುದೇ ಈ ಕಥಾ ಸನ್ನಿವೇಶದ ಮುಖ್ಯ ಉದ್ದೇಶವಾಗಿದೆ. ವಿದುರನು 'ನಿಜ ಶರಣ' ಎಂಬುದನ್ನು ಅಂದಿನ ಲೋಕಕ್ಕೆ ತೋರಿಸಿಕೊಟ್ಟುದು ಸಾಮಾನ್ಯವಲ್ಲ. ದುರ್ಯೋಧನನಿಗೂ ಇದು ತಿಳಿಯಬೇಕಿತ್ತು; ಆದರೆ ಅವಿವೇಕಿ ದುರ್ಯೋಧನನಿಗೆ ಇದು ಗೋಚರಿಸಲಿಲ್ಲ. ಆತನ ಭಕ್ತಿ ಭಾವವನ್ನು ಕುಮಾರವ್ಯಾಸನು ಹೀಗೆ ವರ್ಣಿಸಿದ್ದಾನೆಃ ಕೃಷ್ಣ ಬರಲು ವಿದುರನಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ.

"ತನುವ ಮರೆದನು; ಪುಳಕಜಲದಲಿ ನನೆದು
ನಾರಾಯಣನ ಪದದರುಶನದ ಹರ್ಷಾರಣ್ಯದಲಿ
ಮನ ಹೊಲಬುದಪ್ಪಿದನು; ನೆನೆವ ಸನಕಾದಿ
ಗಳಿಗಿನ್ನುಂ
ಮನಗೊಡದ ಮಹಿಮಾತಿರೇಕನು ಮನೆಗೆ ಬಹ
ಕರುಣಾಳುತನ ಹೊಸತೆನುತ ಹಿಗ್ಗಿದನು;"
"ಎಲೆಲೆ ಭಕ್ತರ ಭಾಗ್ಯಶಾಲಿಯು ಬೆಳಗಳಿವಲಾ
ಎನುತ?
ಹರಿಪದ ನಳಿನಯುಗದೊಳೊಡ್ತಲ ನೀಡಾಡಿದನು
ಭಕ್ತಿಯಲಿ"

ಒಂದು ಕ್ಷಣ ಹರಿಯನ್ನು ನೋಡಿದಾಗ, ಭ್ರಮೆಯೇ ಆಯ್ತು ವಿದುರನಿಗೆ ! ಮನ, ಸಂತೋಷಾತಿರೇಕದಿಂದ, ಕುಣಿಯಲು ಪ್ರೇರೇ ಪಿಸಿತು. ಈ ಭಾವವನ್ನು ವಿವರಿಸಲು ಕವಿಯು : "ವಿದುರನು ಬೀದಿಯಲಿ ಕುಣಿದಾಡಿದನು, ಮನದಣಿಯೆ ಮಿಗೆ ಕೊಂಡಾಡಿದನು; ಮನೆಯು ಮುರಿದೀಡಾಡಿದನು" ಎಂದು ವರ್ಣಿಸಿದ್ದಾನೆ.

"ಒಲವರವು ಕೌತುಕವು, ಪಾಲ್ಗಡಲೊಳಗೆ ಮಲಗಿದ
ವಿಷ್ಣು
ವಿದುರನ ನಿಳಯದೊಳಗೊಕ್ಕುಡಿತೆ ಹಾಲಲಿ
ಹಸಿವನೂಂಕಿದನು;
ಹೊಲಬುಗೆಡಿಸಿದನಖಿಳ ನಿಗಮಂಗಳನು, ತನ್ನರಿಕೆಯು
ಭಜಕಂಗೊಲಿಯೆ, ತಾನೈತಹುದು ಕರುಣದ
ಘನತೆಯೆನೆ ಲೋಕ"

ಇದರ ಪರಿಣಾಮವಾಗಿ ಕೌರವನ ಅರಮನೆಯಲ್ಲಿ, ಹಸ್ತಿನಾವತಿಯಲ್ಲಿ, ಹರಿದುದು ಹಾಲಿನ ಶರಧಿ ! ಕೌರವನಲ್ಲಿಗೆ ಹೋಗಿ "ಪಾಂಡವ ರಾಗಸಮುದಾಯ ಬಂದನು" "ಕಾಣಲುಂಟೇ" ಎಂದು ಕೇಳಿಬರುವಂತೆ ವಿದುರನನ್ನು ಕೌರವನ ಬಳಿ ಕಳಿಸಿದ್ದು, ವಿದುರನು ಕೌರವನಿಗೆ ಅದನ್ನು ತಿಳಿಸಿದುದೂ ಕೌರವನ ಕೋಪೋದ್ರೇಕಕ್ಕೆ ಕಾರಣವಾಯಿತು. 'ಮಾರನೆಯ ದಿನ' ಬರಹೇಳೆಂದು ಕೌರವನು ತಿಳಿಸಿದಂತೆ ಕೃಷ್ಣನು ವಿದುರನೊಡನೆ ಕೌರವನ ಮಹಾಸಭೆಗೆ ಹೊರಡುತ್ತಾನೆ. ಹಾದಿಯಲ್ಲಿ ಕೃಷ್ಣ. ವಿದುರನಿಗೆ ಕೌರವನ ಬಗ್ಗೆ "ರಾವಣನಪರಿ ನೆಲೆಸಿತು ಇವನಲಿ; ಖಳ ಮಾಯಾವಿದನು; ನಮ್ಮ ಯುಕುತಿ ಇವನಲಿ ದೊರೆಕೊಳ್ಳದು"—ಎಂದು ಮೊದಲೇ ತಿಳಿಸಿಬಿಟ್ಟನು. ಸಭೆಯಲ್ಲಿ ಎಲ್ಲರೂ ಕೃಷ್ಣನಿಗೆ ಗೌರವ ತೋರಿಸಿದರೆ ಕೌರವನು ಉದ್ಧಟತನವನ್ನೇ ಮೆರೆದನು. ಕೌರವನ ಸಿಂಹಾಸನದ ಗೋಣಸು ಮುರಿದುದು ಅವನಿಗೆ ಬುದ್ಧಿ ಕಲಿಸಬೇಕಾಗಿತ್ತು. ಆದರೆ ಹಾಗಾಗಲಿಲ್ಲ. ಅವಿವೇಕ ಮತ್ತಷ್ಟು ಅಧಿಕವೇ ಆಯ್ತು. "ಅವಿವೇಕಿ

ತೊತ್ತಿನಮಗ ವಿದುರನ ಮನೆಯಲುಂಡಿರಿ" "ಈ ತೊತ್ತಿನ ಮಗನ ಮನೆಯಲಿ ಹಸಿವ ನೂಕಿದಿರಿ"; "ನಿಮಗೇಕೆ ರಾಯರ ಠೀವಿ" ಎಂದು ಹರಿಯನ್ನೂ, ವಿದುರನನ್ನೂ ತುಂಬಿದ ಮಹಾಸಭೆಯಲ್ಲಿ ಮನವಾರೆ ನಿಂದಿಸಿದುದರಿಂದ, ವಿದುರನಿಗೆ ಸಿಟ್ಟು ನೆತ್ತಿಗೇರಿದುದು ಅತಿ ಸಹಜ. ಅದಕ್ಕೆಂದೇ ವಿದುರನು, ಕೌರವನಿಗೆ, "ದುರುಳ, ಕೆಡೆನುಡಿಸಿಕೊಂಡಿನ್ನು ಕಾವೆನೆ", ಎನುತ ಹಿಡಿದ ಬಿಲ್ಲನ್ನೇ ಮುರಿದು ಹಾಕಿದನು. ಆಗಳೇ ಸಂಜಯನಿಗೆ ಅಪಮಾನವಾಗಿ ಅದರ ನಂತರ ವಿದುರನ ಪಾಳೆಯು ಬಂದಿತು. ಯುದ್ಧದ ಮುನ್ನವೇ ವಿದುರನೂ ಕೌರವರ ಹಗೆಯಾಗಬೇಕಾಯ್ತು. ಇದು ಕೃಷ್ಣನು ವಿದುರನ ಮನೆಯಲ್ಲಿ ಅತಿಥಿಯಾಗಿದ್ದುದರ ಪರಿಣಾಮವೇ. ಈ ಘಟನೆಯಿಂದ, "ಕುರುಸೇನೆ ಕಳವಳಿಸಿತಂತೆ". ವಿದುರನ ಪಕ್ಷದವರಿಗೂ ನೋವಾಯ್ತು ಈ ಘಟನೆಯಿಂದ. ಸಂಧಾನಕ್ಕೆ ಬಂದ ಶ್ರೀಹರಿ, ಕೌರವರ ನಿಷ್ಠಾವಂತರಾದ ಹಿರಿಯರನ್ನು ಹೇಗೆ ಅವರ ಪಕ್ಷದಿಂದ ಒಬ್ಬೊಬ್ಬರನ್ನೇ ಒಡೆದನೆಂಬುದು ಮಹತ್ವದ್ದು. ಕೃಷ್ಣನನ್ನು ಕೌರವನು," ನೀನಖಿಳ ಗೋಪೀಜಾರ, ಜಾರೆಯರಮಕ್ಕಳಿಗೆ ನೀ ಜೀವ" ಎಂದು ನಿಂದಿಸಿದುದು. ವಿದುರನನ್ನು ಬಯ್ದುದೂ ಗಾಂಧಾರಿ, ಧೃತರಾಷ್ಟ್ರ ಭೀಷ್ಮ, ದ್ರೋಣರಿಗೆಲ್ಲ ಅಳಲನ್ನುಂಟು ಮಾಡಿತು. ಹರಿಯನ್ನು ನಿಂದಿಸಿದುದು ಮಾತ್ರವಲ್ಲ ಅವನನ್ನು ಕಟ್ಟಿಹಾಕುವ ಸಾಹಸಮಾಡಿದ್ದಂತೂ ತೀರ ಅವಿವೇಕದ ಕೃತ್ಯ. ದೂತನಾಗಿ ಬಂದವನನ್ನು ಈ ರೀತಿ ಅಪಮಾನಗೊಳಿಸಿದುದು ಮುತ್ಸದ್ದಿತನದ ಲಕ್ಷಣವಾಗಿರಲಿಲ್ಲ. ದುರ್ನಡತೆಗೆ ಮತ್ತೊಂದು ಉದಾಹರಣೆಯಾಯ್ತು. ಕೃಷ್ಣನು 'ವಿರಾಟರೂಪದರ್ಶನ'

ಮಾಡಿದರೂ ಕೌರವನಮೇಲೆ ಯಾವಸತ್ಪರಿಣಾಮವನ್ನೂ ಅದು ಮಾಡಲಿಲ್ಲ. ದುಷ್ಕೃತ್ಯಗಳ ಮೊತ್ತಕ್ಕೆ ಅಧಿಕವಾಯ್ತು! ಭಗವಂತನು ಸುಧಾರಿಸಲು ಒದಗಿಸಿದ ಸನ್ನಿವೇಶಗಳನ್ನು ದುಷ್ಟರು ಗಮನಕ್ಕೇ ತೆಗೆದುಕೊಳ್ಳುವುದಿಲ್ಲ. ಅದರಂತೆ ದುರ್ಯೋಧನನೂ ಗಮನಕ್ಕೆ ತೆಗೆದುಕೊಳ್ಳಲಿಲ್ಲ.

ಭೇದೋಪಾಯದಿಂದ ಕರ್ಣನನ್ನು ಒಡೆದುಕೊಂಡುದು ರಾಜಕೀಯವಾಗಿ ಮಹತ್ವದ್ದು.

ತನ್ನ ಕಾರ್ಯ ಫಲಪ್ರದವಾಗಬೇಕಾದರೆ ಕರ್ಣನನ್ನು ತಮ್ಮ ಪಕ್ಷಕ್ಕೆ ಒಡೆದುಕೊಳ್ಳಬೇಕೆಂಬುದು ಕೃಷ್ಣನ ಇನ್ನೊಂದು ಯೋಜನೆ. ಸಂಧಿಯ ಮಾತುಕತೆಗಳು ವಿಫಲವಾದುವು. ಯುದ್ಧ ಅನಿವಾರ್ಯವಾಯಿತು. ಭೂಭಾರಕರನ್ನು ಸಂಹರಿಸಿ ಶಿಷ್ಟರ ರಕ್ಷಣೆಮಾಡಬೇಕೆಂಬುದು ಶ್ರೀಕೃಷ್ಣನ ನೀತಿಯಾಗಿದ್ದಿತು. ಆದುದರಿಂದ ಸಂಧಿಗೆಂದು ಕೃಷ್ಣನು ಹಸ್ತಿನಾವತಿಗೆ ತೆರಳಿದುದಕ್ಕೆ ಮುಖ್ಯಕಾರಣ ವೈರಿಗಳಲ್ಲಿ ಅಶಾಂತಿ. ಅಸಮಾಧಾನ, ಅನೈಕ್ಯಗಳನ್ನು ಹುಟ್ಟು ಹಾಕುವುದೇ ಆಗಿತ್ತು. ಭೀಷ್ಮ. ದ್ರೋಣ, ವಿದುರ ಹಾಗೂ ಸಂಜಯರಲ್ಲಿ ಕೌರವನ ಬಗೆಗೆ ಕೃಷ್ಣ ಈಗಾಗಲೇ ಅತೃಪ್ತಿಯ ಭಾವನೆಗಳನ್ನು ಉಂಟುಮಾಡಿದ್ದ. ಕೌರವನ ಇನ್ನೊಬ್ಬ ಬಲಗೈಬಂಟನೆಂದರೆ ಕರ್ಣ. ಕೌರವನಿಗೆ ಆಪ್ತಮಿತ್ರ, ವೀರಾಧಿವೀರ, ನಂಬಿಗಸ್ಥನಾದ ಕರ್ಣನನ್ನು ತಮ್ಮತ್ತ ಸೆಳೆದುಕೊಳ್ಳುವ ಉದ್ದೇಶದಿಂದ ಶ್ರೀಕೃಷ್ಣ, "ಇನತನೂಜನಿದ್ದೆಡೆಗೆ ಹೋದನು. ಆತನೊಡನೆ ಮೈದುನತನದ ಸರಸವನೆಸಗಿ, ತನ್ನರಥವಲ್ಲಿ ಕುಳ್ಳಿರಿಸಿಕೊಂಡು ಆತನಿಗೆ ಜನ್ಮದ ರಹಸ್ಯವನ್ನು ಹೇಳಿ. ರಾಜ್ಯ ಅಧಿಕಾರದ ಆಸೆ ತೋರಿ, ಅವನು ಸೂತಸುತನಲ್ಲವೆಂಬ ಭಾವವನ್ನು ಕರ್ಣನಲ್ಲಿ

ದೃಢಪಡಿಸಿದನು. ಆತನ ಕಿವಿಯಲ್ಲಿ ಭಯವ ಬಿತ್ತಿದನು; ತನ್ಮೂಲಕ ಕೌರವನ ಕೊಂದನು. ಕರ್ಣನನ್ನು "ನೀ ಭಾನುವಂಶ ತಿಲಕನು, ಶ್ರೀರಾಮಂಗೆ ಸರಿ" ಎಂದು ಹೊಗಳಿದನು. ತನ್ನ ಕೈಯಿಂದ ಆತನಿಗೆ ತಂಬುಲವಿತ್ತನು. ಪಾಂಡವರ ಮೊದಲಿಗನಾದುದರಿಂದ ಧರಣಿಯ ಕದನವಿತ್ತುಂಡಕ್ಕೆ ಕಾಮಿತವಲ್ಲ.—ಇತ್ಯಾದಿಯಾಗಿ ಸವಿಮಾತುಗಳನ್ನಾಡಿದುದಲ್ಲದೆ. "ನೀನು ದುರ್ಯೋಧನನ ಬಾಯ್ತಂಬುಲಕೆ ಕೈಯಾನುವರೇ?' "ಕುರುಪತಿ ನುಡಿಸೆ, ಜೀಯ, ಪಸಾದ" ಎನ್ನುವರೇ? ನಿನ್ನ ವೈಭವಕೆ ಸರಿಯಾರು?—ಎಂಬೀ ಅಗ್ಗಳಿಕೆಯ ಮಾತುಗಳನ್ನಾಡಿ ಆತನ ಶೌರ್ಯ, ಕುಲ, ಅಭಿಮಾನಗಳ ಬಗೆಗೆ ಆತನಲ್ಲಿ ಅತ್ಯಭಿಮಾನ ಮೂಡುವಂತೆ ಮಾಡುತ್ತಾನೆ. ಆದುದರಿಂದ ಆತನಿಗೆ ಮಾತುಗಳೇ ಬಾರದಂತಾಗಿ,ಆತನಲ್ಲಿ ಗಂಭೀರ ಮೌನ ಆವರಿಸುತ್ತದೆ "ಅಕ್ಕಟಾ" ಎನ್ನುತ್ತಾನೆ ಕರ್ಣ ! ಆದರೂ ಕೌರವನ ಉಪ್ಪುಂಡ ತಾನು ಅವನಿಗೆ ಎರಡು ಬಗೆಯದ ಕರ್ಣನು "ಕೌರವೇಂದ್ರನ ಎಂತು ಮರೆದಪೆನು? ಕಾಡಲಾಗದು ಕೃಷ್ಣ ! ಖ್ಯಾತಿಯ ಮಾಡಲಾಗದು! ಬಂದರೆ ರೂಢಿ ಮೆಚ್ಚದು! ಸಮರದಲಿ ನೀ ನಿನ್ನವರ ನಿಲಿಸು: ಭುಜಬಲದ ಶೌರಿಯವ ತೋರುವೆನು" ಎಂದು ಖಡಾಖಂಡಿತವಾಗಿ ನುಡಿಯುತ್ತಾನೆ. ನಿನ್ನೈವರನು ನೋಯಿಸೆನು —ಎಂದೂ ನುಡಿಯುತ್ತಾನೆ. ಇದರಿಂದಾಗಿ ಕೃಷ್ಣನಿಗೆ ಸಂಪೂರ್ಣ ತೃಪ್ತಿಯಾಗದಿದ್ದರೂ ಅರ್ಧಕಾರ್ಯ ಫಲಿಸಿತೆಂದು ಭಾವಿಸಿ. ಕುಂತೀದೇವಿಯನ್ನು ಕರ್ಣನ ಬಳಿಗೆ ಕಳಿಸಿ, ತನ್ನ ಕಾರ್ಯವನ್ನು ಪೂರ್ಣ ಮಾಡಿಕೊಳ್ಳುತ್ತಾನೆ . ಸಂಧಿ ಕ್ಷತ್ರಿಯರ ಮತವಲ್ಲ'—ಎಂದು ಕರ್ಣನು ಕೃಷ್ಣನಿಗೆ ಆಡಿದ ಕೊನೆಯ

ಮಾತು ಗಮನಾರ್ಹ. ಕೃಷ್ಣನು ಕರ್ಣನಿಗೆ ಏಕಾಂತದಲ್ಲಿ ತಿಳಿಸು ತ್ತಾನೆ; ಇದು ಸಹ ಅವನ ರಾಜಕೀಯ.

ಕೃಷ್ಣನು ತನ್ನ ಕಾರ್ಯ ಮುಗಿಸಿಕೊಂಡು ಹೋದಮೇಲೆ ಕೃಷ್ಣನ ಅಭಿಪ್ರಾಯದ ಮೇರೆಗೆ ಕುಂತೀದೇವಿ ಒಂದುದಿನ (ರವಿವಾರ) ಗಂಗಾನದಿಯಲ್ಲಿ ಕರ್ಣನು ಸೂರ್ಯನಿಗೆ ಅರ್ಘ್ಯವನ್ನು ಕೊಡು ತ್ತಿದ್ದಾಗ ಅಲ್ಲಿಗೇ ಆಗಮಿಸಿದಳು. ಕರ್ಣನು ತನ್ನ ಮಗನೆಂಬುವನ್ನು ಹೇಳಿ ಕಣ್ಣೀರಿಟ್ಟಳು. ಕರ್ಣನು ಕುಂತೀದೇವಿಯನ್ನು ಕಾಣುತ್ತಲೇ ಭಕ್ತಿಭಾವ ಹೊರಹೊಮ್ಮಿ ದೀರ್ಘದಂಡ ನಮಸ್ಕಾರ ಮಾಡಿದ. ಕುಂತೀದೇವಿ ತಾಯಿಯೆಂಬುದನ್ನು ಕೃಷ್ಣ ಹೇಳಿದ್ದ; ಮತ್ತೆ ಸೂರ್ಯನೂ ಹೇಳಿದ. "ಮಗನೆ ತಮ್ಮಂದಿರನು ಪಾಲಿಸು; ಪರರೋಲಗವ ನೀ ಮಾಡುವರೇ?–ಎಂದು ಮೊದಲಾಗಿ ಕುಂತಿ, ಹೇಳಿದರೆ ಈ ಇಳೆಯ ಬಾಳಿಕೆ ಕೃತಘ್ನರಿಗಿಲ್ಲ" ಧಾರಿಣಿಯ ಬಯಸುವೆನೇ"? ಹೇಸಳೇ ಜಯಲಕ್ಷ್ಮಿ? –ಎಂದು ಆಕೆಗೆ ಸೂಕ್ತ ಪ್ರತ್ಯುತ್ತರ ವಿತ್ತನು. ಇಂದು ನೀವರುಹಿದ ಬಳಿಕ ರವಿನಂದ ನನೆಂದು ಅರಿದೆನು. ಹಿಂದೆ ದುರ್ಯೋಧನನದಾವುದ ನೋಡಿ ಸಲಹಿದನು? ಎಂದೂ ಹೇಳಿದನು, "ಹೋದ ಬಾಣವ ಮರಳಿ ತೊಡದಿರು"–ಎಂದು ಕುಂತೀದೇವಿ ಕೇಳಿದುದಕ್ಕೆ "ಹಸಾದ" ವೆಂದನು ಕರ್ಣ. ಈ ರೀತಿ ಸಂಧಿ ಮುರಿದುಹೋಯಿತು. ಪಾಂಡ ವರು ಯುದ್ಧಕ್ಕೆ ಸನ್ನದ್ಧರಾದರು. ಕುರುಕ್ಷೇತ್ರದತ್ತ ಇಬ್ಬರ ಸೈನ್ಯಸಾಗಿತು. ಅಪಾರಸೈನ್ಯ ಸಾಗರೋಪಮವಾಗಿತ್ತು. ಪಾಂಡ ವರ ಪಕ್ಷದಲ್ಲಿ ದ್ರುಪದನು ಸೇನಾಧಿಪತಿಯಾಗಿ, ದೃಷ್ಟದ್ಯುಮ್ನನು ದಳಪತಿಯಾಗಿ ಆಯ್ಕೆಯಾದರು. ಈ ಕಥಾಸನ್ನಿವೇಶದ ಜೌಕಟ್ಟು, ಒಳ್ಳೆಯ ಕಲಾತ್ಮಕವಾಗಿದೆ, ಸಂಧಾನದ ವಿಷರ ಮುಗಿದೊಡನೆ ಈ ಪರ್ವದ ಕಥೆ ಕೊನೆಗಾಣುತ್ತದೆ.

೪. ಪಂಪಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ

ವಿರಾಟರಾಜ ಉತ್ತರೆಯನ್ನು ಅಭಿಮನ್ಯುವಿಗೆ ಕೊಟ್ಟು ಪಾಂಡವರ ಪ್ರೀತಿವಿಶ್ವಾಸ ಸಂಪಾದಿಸಿದನು. ಪಾಂಡವರ ಬಾಂಧವ್ಯ ವಿರಾಟನಿಗೆ 'ಕುರುಡಂ ಕಣ್ಬೆತ್ತಂತಾಯ್ತು'. ಈ ಕಾರ್ಯಕ್ಕೆಂದೇ ಶ್ರೀಕೃಷ್ಣ ವಿರಾಟನಗರಕ್ಕೆ ಆಗಮಿಸಿದ್ದನು. ಆ ಕಾರ್ಯ ಮುಗಿದಮೇಲೆ ಶ್ರೀಕೃಷ್ಣ ದ್ವಾರಾವತಿಗೆ ತೆರಳಿದ. ವಿವಾಹವು ನೆರವೇರಿಸಲ್ಪಟ್ಟನಂತರ ಪಾಂಡವರು ತಮ್ಮೊಳ್ಳೆ ವಿಚಾರಿಸಿ, ವನವಾಸ, ಅಜ್ಞಾತವಾಸ ಪೂರೈಸಿದುದಾಯಿತು; ದುರ್ಯೋಧನನಾದರೆ "ಶ್ವೇತಕೃಷ್ಣಕಾರಕ". ಇನ್ನು ಸುಮ್ಮನಿರಲಾಗದು. ಶ್ರೀಕೃಷ್ಣನನ್ನು ದುರ್ಯೋಧನನಿಗಿಂತ ಮೊದಲೇ ತಮ್ಮ ಪಕ್ಷಕ್ಕೆ ಒಲಿಸಿಕೊಳ್ಳುವುದು ಉತ್ತಮ ಎಂದು ಆಲೋಚಿಸಿ ಆ ಕಾರ್ಯಕ್ಕೆ ಅರ್ಜುನನನ್ನು ದ್ವಾರಾವತಿಗೆ ಕಳಿಸಿದರು. ಅದೇವೇಳೆಗೆ ದುರ್ಯೋಧನನೂ ಆಗಮಿಸಿದನು. ಒರಗಿರ್ದ ಕೃಷ್ಣನು ಇಬ್ಬರನ್ನೂ ಕಂಡು, ಕುಶಲವಾರ್ತೆ ಮಾತ್ರ ನಾಡಿದ ಬಳಿಕ ಬಂದಕಾರಣ ಕೇಳಿದಾಗ, "ಎಮ್ಮಂ ಕೆಯ್ಕೊಂಡು ಗೆಲಿಸಲ್ವೇಳ್ಕುಂ" –ಎನ್ನಲು , ತಾನು ಅರ್ಜುನನಿಗೆ ಒಲಿದುದನ್ನು ತಿಳಿಸಿ, ದುರ್ಯೋಧನನಿಗೆ 'ಚತುರ್ಬಲ' ವನ್ನು ಕೊಡುವುದಾಗಿ

ಹೇಳಿದನು. ಅರ್ಜುನನೊಡನೆ ವಿರಾಟಪುರಕ್ಕೆ ಆಗಮಿಸಿದ ಶ್ರೀಕೃಷ್ಣನು ಪಾಂಡವರೊಡನೆ ಒಂದೆರಡು ದಿವಸ ಸುಖದಿಂದಿದ್ದನು. ಧರ್ಮರಾಜನು ಶ್ರೀಕೃಷ್ಣನನ್ನು "ಅಸುರಕುಳಾಂತಕಾ ಎಮ್ಮನ್ನುದ್ಧರಿಂ ಕಾವುದು". ದುರ್ಯೋಧನನು ನಮಗೆ ಯುದ್ಧಮಾಡದೆ ನಮ್ಮ ಭೂಮಿಯನ್ನು ಬಿಟ್ಟುಕೊಡುವುದಿಲ್ಲ. ಹಾಗೆಯೇ ನಾವು ಉಳಿದರೆ ನಿಸ್ತೇಜವಂತರೆಂದೆನಿಸಿಕೊಳ್ಳುತ್ತೇವೆ. ಮುಂದೇನು ಮಾಡಬೇಕು ಎಂದು ಕೇಳಿದುದಕ್ಕೆ ಶ್ರೀಕೃಷ್ಣನು: ಮೃದುತನದಿಂದ ಒರಟು ನಾಶವಾಗುತ್ತದೆ; ಹೊಗಳಿಕೆಯಿಂದ ಪ್ರೀತಿ ಬಲಿಯುತ್ತದೆ: ಸಾಮವನ್ನು ಮೊದಲು ಪ್ರಯೋಗಿಸಿ. ನಂತರ ದಂಡವನ್ನು ಪ್ರಯೋಗಿಸುವವನು ನಿಜಮಂತ್ರಿ. ಆದ್ದರಿಂದ ನೀನು ಮೊದಲು ಭೂಮಿಯನ್ನು ಬೇಡಿ ಯಾರನ್ನಾದರೂ ಕಳಿಸು; ಅವನು ಕೊಡ ದಿದ್ದರೆ ಯುದ್ಧ"–ಎಂದು ಸಲಹೆ ನೀಡಿದನು. ಭೀಮಸೇನ ದುರ್ಯೋಧನನ ದುರ್ನಯಕ್ಕೆ ಕಿಡಿಕಿಡಿಹೋದನು. ನೀವು ಸಂಧಿ ಮಾಡಿಕೊಂಡರೆ ಅದನ್ನು ನಾನು ಕೆಡಿಸದಿರೆನೇ–ಎಂದನು. ಒಬ್ಬ ನನ್ನು ಕೊಂದು ಅವನ ಕರುಳನ್ನು ಉರ್ವಿಗೆ ತೋಡುವೆ; ಇನ್ನೊಬ್ಬನ ತೊಡೆಗಳನ್ನು ಮುರಿವೆ" ಎಂದು ಅಬ್ಬರಿಸಿದನು; ಕುರುವಂಶ ವನ್ನೇ ನಾಶಪಡಿಸುವುದಾಗಿ ಗರ್ಜಿಸಿದನು. ಆಗ ನಾರಾಯಣ, ಧರ್ಮರಾಜ–ಈ ಇಬ್ಬರೂ ಭೀಮನನ್ನು ಸಮಾಧಾನ ಮಾಡಿದರು. ದುರ್ಯೋಧನನು ನಮ್ಮ ಭಾಗದ ಭೂಮಿಯನ್ನು ಕೊಟ್ಟರೆ ಸರಿ, ಇಲ್ಲದಿದ್ದರೆ ನನ್ನ ಭುಜಗಳು ಕೌರವರನ್ನು ಕೊಲ್ಲದಿರವು ಎಂದು ಭೀಮ ನುಡಿದನು. ಆಮೇಲೆ ಧರ್ಮರಾಜನು ದುರ್ಯೋಧನ ನಲ್ಲಿಗೆ ದೂತಕಾರ್ಯಕ್ಕೆಂದು ಶ್ರೀಕೃಷ್ಣನನ್ನು ಹಸ್ತಿನಾಪುರಕ್ಕೆ ಕಳಿಸಿದನು.

ವಿರಾಟನಗರದಿಂದ ಹೊರಟ ಶ್ರೀಕೃಷ್ಣನು 'ವಿದುರನು ಪಾಂಡವಪಕ್ಷಪಾತಿ'' ಯಾದುದರಿಂದ ಆತನ ಮನೆಗೆ ಬಂದು ಕೊಂತಿ ಮೊದಲಾದವರನ್ನು ಕಂಡು ಆ ದೇವಿಗೆ ಎರಗಿ, ವಿದುರನನ್ನು ಹರಸಿ, ಪಾಂಡವರ ಕುಶಲಸಮಾಚಾರವನ್ನು ತಿಳಿಸಿದನು; ವಿದುರನು ನೀಡಿದ ಬಡ ಆತಿಥ್ಯದಿಂದ ದಣಿವಾರಿಸಿಕೊಂಡನು. ಕೃಷ್ಣ ಬಂದ ಸುದ್ದಿಯನ್ನು ವಿದುರನು ದುರ್ಯೋಧನನಿಗೆ ತಿಳಿಸಿದನು. ಅದಕ್ಕೆ ಸುಯೋಧನನು ಶ್ರೀಕೃಷ್ಣನನ್ನು "ನಾಳಿನೋಲಗದೊಳ್ ತಂದು ಕಾಣಿಸು'' ಎಂದು ಅಪ್ಪಣೆಮಾಡಿದನು. ದುರ್ಯೋಧನನು ಮರುದಿನ ಒಡ್ಡೋಲಗವನ್ನು ಕರೆದಿದ್ದನು. ಅದರಲ್ಲಿ ಅನೇಕ ರಾಜ ಮಹಾರಾಜರುಗಳಲ್ಲದೆ ಭೀಷ್ಮ. ದ್ರೋಣ, ಅಶ್ವತ್ಥಾಮ, ಕೃಪ, ಕೃತವರ್ಮ, ಶಲ್ಯ. ಶಕುನಿ, ಬಾಹ್ಲೀಕ, ಸೋಮದತ್ತ, ಭಗದತ್ತ, ಭೂರಿಶ್ರವ, ಮೊದಲಾದ ಪ್ರಭೃತಿಗಳಿದ್ದರು; ಅಲ್ಲದೆ ಕೌರವನ ಪತ್ನಿಯರು, ನೂರುತಮ್ಮಂದಿರು, ನೂರುಮಕ್ಕಳು, ಕರ್ಣ, ಇವರೆಲ್ಲ ಎಡೆವರಿದು ಕುಳಿತಿದ್ದರು. ಆ ಒಡ್ಡೋಲಗವು ಇಂದ್ರನ ಒಡ್ಡೋಲಗವನ್ನೇ ಕೀಳ್ಮಾಡುವಂತಿತ್ತು. ಆ ಒಡ್ಡೋಲಗದ ಮೂರನೆಯ ಬಾಗಿಲಿಗೆ ಹರಿಯು ಬರವನ್ನು ತಿಳಿದ ಪಡಿಯರರು ಸುಯೋಧನನಿಗೆ ತಿಳಿಸಲು ಅವನು :

"ಲೋಕಗುರು, ಶಂಖಚಕ್ರ ಗಧಾಕರನತಿಶಯ
ಚತುರ್ಭುಜಂ
ಜನಜನಿತ ವ್ಯಾಕುಳದೆ ಬಂದನೆಂದೊಡೆ,
ಲೋಕದೊಳ್
ಇನ್ನೆನ್ನ ದೊರೆಗೆ ಪಿರಿಯರುಂ ಒಳರೇ' –

ಎಂದು ವಿಚಾರಿಸಿ ಪಡಿಹಾರಿಸಿ ಶ್ರೀಕೃಷ್ಣನನ್ನು ಒಳಗೆ ಬರಹೇಳಲು ತಿಳಿಸುತ್ತಾನೆ. ಕೃಷ್ಣನು ಒಳಗೆ ಬರಲು ಸುಯೋಧನನು, ಮುಯ್ಯಲಸಿದಂತೆ ಎಂತಾನುಂ ಏಳ್ದು, ಇದಿರ್ಗೆ, ಕೇಸರಿಪೀಠಾಗ್ರದಿಂ ಅಪ್ಪಿಕೊಂಡು, ಪೊಡೆವಟ್ಟು. ಉಚ್ಚಾಸನಾಸೀನನಾಗಿರವೇಳ್ದು, ಅರ್ಘ್ಯ-ಮನಿತ್ತು. ಅನಂತರಮ ತಾನುಂ, ಕುಳಿತುಕೊಳ್ಳುತ್ತಾನೆ. "ಕಂಸಾರಿ. ನಿನ್ನೆನ್ನವೋಲ್ ಸೈಪಂಪಡೆದರ್ ಒಳರೇ? ಯುಷ್ಮತ್ ಪಾದ ಪಾಂಸುಗಳಿಂದಾಂ ಪವಿತ್ರಗಾತ್ರನೆ ಆದೆಂ; ನಿಮ್ಮ ಬರವಿನೊಳ್ ಈಗಳ್ ಎನಗಂ ಅಗುಂದಲೆಯನಾಯ್ತು "ಬಂದ ಕಾರ್ಯವಾವುದು?" ಎಂದು ಕೇಳುತ್ತಾನೆ. ಅದಕ್ಕೆ ಶ್ರೀಕೃಷ್ಣ ಸುಯೋಧನನನ್ನು ಹೊಗಳಿ, ಪಾಂಡವರನ್ನು ಹೊರಗಿಟ್ಟು ನೀನು ಭೂಮಿಪತಿ (ಕುವಳಯಪತಿ) ಎನಿಸಿಕೊಂಬುದು ಸರಿಯೇ? ಯಾವುದೇ ಮನಸ್ತಾಪದಿಂದ ಪರಸ್ಪರರು ಅಗಲಿದ್ದೀರಿ, ಕಾಯ್ದ ಬೆಣ್ಣೀರ್ ಮನೆ ಸುಡದು —ಎಂಬಂತೆ ನಿಮ್ಮವರ ಮನಸ್ತಾಪ. ಪಾಂಡವರನ್ನು ಸ್ನೇಹಿತರನ್ನಾಗಿ ಮಾಡಿಕೊಂಡರೆ ನಿನಗೆ ವಿರೋಧಿಗಳಿಲ್ಲ. ಪಟ್ಟಾಧಿಕಾರಕ್ಕೆ. ಯುದ್ಧಕ್ಕೆ ಪಾಂಡವರೇ ಮೊದಲಿಗರು. ಅವರು ನಿನಗೆ ಸ್ನೇಹಿತರಾಗೆ ನಿನಗೆ ಸಮಾನರಾರು? ನೀನು ಕರುಣಿಸಿ ಕೊಟ್ಟುದನ್ನು ಪ್ರತಿಮಾತನಾಡದೆ ಪಾಂಡವರು ಸ್ವೀಕರಿಸುತ್ತಾರೆ. ಪಾಂಡವರು ಅಡವಿಯಲ್ಲಿ ನೊಂದಿದ್ದಾರೆ. ಪಾಂಡವರಂತೆ ನಿನಗೆ ನೆರವಾಗುವವರು ಬೇರೆ ಯಾರೂ ಇಲ್ಲ. ಡಂಭಕರ ಮಾತು ಕೇಳಬೇಡ. ನೀನು ಒಳ್ಳೆಯವನೆಂದೆನಿಸಿಕೊಳ್ಳಲು ಏನೂ ಇಲ್ಲದ ಪಾಂಡವರಿಗೆ ಕಂಚಿ. ವಾರಣಾಸಿ. ಕಾಕಂದಿ, ಕುರುಸ್ಥಳ, ವೃಕಸ್ಥಳ ಎಂಬ ಐದು ಊರುಗಳನ್ನು ಕೊಟ್ಟು ದಯೆಗೆಯ್ —ಎಂದುದಕ್ಕೆ ದುರ್ಯೋಧನನು ಕೋಪೋದ್ರಿಕ್ತನಾದನು.

ಕೃಷ್ಣನ ಪಾಂಡವಪ್ರೀತಿಯು, ಧರ್ಮೋಪದೇಶದ ಮಾತುಗಳು ಸುಯೋಧನನಿಗೆ ರುಚಿಸಲಿಲ್ಲ. ಪಾಂಡವರೊಡಗೂಡಿದಂತೆ ಕೃಷ್ಣನೂ ವಂಚಕನೆಂಬ ಭಾವದ ಮಾತುಗಳನ್ನಾಡಿದನು. ಅಲ್ಲದೆ "ಬಂದ ಬಟ್ಟೆಯಿಂ ಬಿಜಯಂಗೆಯ್" ಎಂದು ಕೃಷ್ಣನಿಗೆ ನುಡಿದನು. ಆದರಿಂದಾಗಿ ಕೋಪಗೊಂಡ ಕೃಷ್ಣನು, "ಸೀತೆಯ ಕಾರಣದಿಂದ ಳಿದ ರಾವಣ ಹಾಗೆ ನೀನೂ ಅಳಿವೆ; ನೀನು ಉದ್ಧಟತನದಿಂದ ಮೈಯ್ಯ ನೆತ್ತರದ ಉಕ್ಕಿನಿಂದ ಸಾಯಲು ಬಯಸುತ್ತೀಯೊ? ಭೀಮ ನಕುಲ–ಸಹದೇವರ ಕೋಪ, ಅರ್ಜುನನ ಪ್ರತಾಪ ನಿನಗರಿಯವೇ ? ಧರ್ಮರಾಜನು ವೈರಿಬಲಕ್ಕೆ ಅಂಜುವನಲ್ಲ. ಅರ್ಜುನನ ಸಾಹಸಕ್ಕೆ ಸಮಾನರಾರೂ ಇಲ್ಲ. ಗೋಗ್ರಹಣಕಾಲದಲ್ಲಿ ನಿಮಗೇನಾಯಿತು? ಎಂದು "ಕಾಳಮೇಘದಂತೆ ಮಸಗಿ ಗರ್ಜಿಸಿದ" ಕೃಷ್ಣನ ನುಡಿಗೆ ದುರ್ಯೋಧನನು, "ದೂತನ ಮಾತಿಗೆ ಕೋಪಿಸಬಾರದು;" "ವಿದುರನೆಂಬ ತೊತ್ತಿನಮನೆಯ ಕೂಳೇ ನಿನ್ನನ್ನು ಹೀಗೆ ನುಡಿಯಿಸಿದೆ"–ಎಂದುದಕ್ಕೆ ವಿದುರನು ಕೋಪಿಸಿ, "ಇನ್ನು ಬಿಲ್ಲಂ ಪಿಡಿಯೆಂ" ಎಂದು ಅದನ್ನು ಮುರಿದುಹಾಕಿದನು. ಸಿಟ್ಟಿನಿಂದ ದುರ್ಯೋಧನನು, ಶ್ರೀಕೃಷ್ಣನಮೇಲೆ "ನಂಜಿನಮೇಲೆ ಹಾಯ್ವ ನೊಳವಿನಂತೆ ಹರಿಹೋದನು. ಆಗ ಶ್ರೀಕೃಷ್ಣನು ಆ ಸಭೆಗೆ ತನ್ನ ವಿಶ್ವರೂಪವನ್ನೇ ತೋರಿಸಿದನು–(೯–೭೦). ಆಗ ಅನೇಕ ರೀತಿಯಿಂದ ಸ್ತುತಿ ಮಾಡಿದ ಧೃತರಾಷ್ಟ್ರಾದಿಗಳನ್ನು ಹರಸಿ, ತ್ರೈಲೋಕ್ಯಗುರು ಮುನ್ನಿನಂತೆ ಮನುಷ್ಯದೇಹಮಂ ಕೆಯ್ಕೊಂಡು, ಗುರುತನೂಜನ ಕೈಯಂ ಪಿಡಿದು, ಅರಮನೆಯಂ ಪೊರಮಟ್ಟು, ಕಪಟ ಪ್ರಪಂಚದಿಂದ ಆತನುಮಂ ತನಗೆ ಮಾಡಿ, ಬೀಡಿಂಗೆ ವಂದು ಕುಂತಿಗೆ, ಏಕಾಂತದೊಳ್

"ಗುರುಕೃಪಶಲ್ಯಸಿಂಧುಸುತರಪ್ಪೊಡೆ ನಮ್ಮಯ
ಪಕ್ಷ;
ಒಂದಿದಂ ಗುರುಸುತನೀಗಳೆಮ್ಮೊಳ್: ಅಂಕದ
ಕರ್ಣನ್
ಗೆಲಲ್ಕರಿಯನ್; ಆತನೆ ಬಾರದನ್: ಬೀರಮ್
ಆತನಿಂ
ಉರಿಪರಿದಿತ್ತು. ಚಾಗಮ್ ಅವನಿಂ ಎಸೆದತ್ತು"–

ಎಂದು ಕರ್ಣನ ಬಗೆಗೆ ಹೇಳಿ, ಕರ್ಣನು ಕೇಳಿದವರಿಗೆ ಕೇಳಿದುದನ್ನು ಕೊಡುವ ಮಹಾದಾನಿ. "ನಾನು ಎನ್ನಬಲ್ಲಮಾಳ್ಕೆಯಿಂ ಭೇದಿಸಿದಪ್ಪೆಂ; ನೀಮುಂ ನಿಮ್ಮ ಜೊಚ್ಚಿಲಮಗನಪ್ಪ ಸೂರ್ಯಸೂನುಮಂ, ಸೂರ್ಯದಿನದಂದು ಕಂಡು". ಕಾರ್ಯಸಿದ್ಧಿಯಂ ಮಾಡಿಬನ್ನಿಂ ಎಂದು ಕೊಂತಿಯಂ ಬೀಳ್ಕೊಂಡು . ಅಲ್ಲಿಂದ ಕರ್ಣನ ಮನೆಯ ಮುಂದೆಸೆ ಬಂದು. ಮೇಲೆ ಬೀಳ್ದು. ಎಮ್ಮಂ ಕರಿಮಂತರಂ ಕಳಿಪಿ ಮಗುಳ್ವ ಬಾ ಪೋಪಂ ಎಂದು ತನ್ನೊಡನೆ ರಥಮನೇರಿಸಿಕೊಂಡು ಪೋಗಿ, ಒಂದೆಡೆಯೊಳ್ ನಿಂದು, ನಿನಗೆ ಕೊಂತಿ ಅಬ್ಬೆ; ಅಹರ್ಪತಿ ನಿನಗೆ ಅಮ್ಮ (ಅಪ್ಪ): ಪಾಂಡುನಂದನರ್ ಸೋದರರ್; ಮೇದಿನಿಯುಪಟ್ಟಮುಂ ನಿನತೆ.....' ಇತ್ಯಾದಿಯಾಗಿ ಕರ್ಣನ ಜನ್ಮರಹಸ್ಯವನ್ನು ತಿಳಿಸಿದನು; ಅಲ್ಲದೆ ದುರ್ಯೋಧನನಿಗೆ ನಿನ್ನ ಜನ್ಮರಹಸ್ಯ ತಿಳಿದಿದ್ದು "ಮುಳ್ಳಿನಿಂದ ಮುಳ್ಳು ತೆಗೆವಂತೆ" ನಿನ್ನನ್ನು ರಕ್ಷಿಸಿದ್ದಾನೆ ಎಂದೂ ಹೇಳಿದನು. 'ಪಾಂಡವರೊಳು ನಾನು ಸೇರಿದರೆ ನಿಮಗೇ ಹೇಸಿಕೆ ಎನ್ನುತ್ತಾನೆ ಕರ್ಣ ಕೃಷ್ಣನಿಗೆ. ಕರ್ಣನು ತನ್ನ ಪಕ್ಷಕ್ಕೆ ಬಾರದುದನ್ನರಿತು ಶ್ರೀಕೃಷ್ಣನು

ಅಲ್ಲಿಂದ ಕಾಲ್ಟೆಗೆದನು. ಕರ್ಣನು ಚಿಂತಾಕ್ರಾಂತನಾಗಿ ಸೋದರರನ್ನು ಕೊಲ್ಲಲು ಮನಸ್ಸೀಯದೆ ರಣರಂಗದಲ್ಲಿ ತನ್ನೊಡಲನೀಡಾಡುವುದಾಗಿ ನಿರ್ಧರಿಸುತ್ತಾನೆ.

ಒಂದು ದಿನ ರವಿವಾರ ಕರ್ಣನು ಮಂದಾಕಿನಿಯಲ್ಲಿ ಸೂರ್ಯನಿಗೆ ಅರ್ಘ್ಯವನ್ನೀಯುತ್ತಿದ್ದಾಗ ಮಂಗಳಾಂಗನೆ ಕೊಂತಿ ಅಲ್ಲಿಗೆ ಆಗಮಿಸಿದಳು. ಗಂಗಾನದಿ ಕರ್ಣನನ್ನು ಆ ತಾಯಿಗೆ ಒಪ್ಪಿಸಿದಳು. ಸೂರ್ಯನು ಆಗ ಕರ್ಣನಿಗೆ "ನಿನ್ನಂಬಿಕೆ ನಿನ್ನಲ್ಲಿ ಪಾಂಡವರನ್ನು ಕಾಪಾಡಬೇಕೆಂಬ ವರವ ಕೇಳಲು ಬಂದಳು; "ಎನಿತು ಲಲ್ಲೈದಡಂ ಪುರಿಗಣೆಯನೆ ಕುಡದಿರ್" ಎಂದುದಕ್ಕೆ 'ತಥಾಸ್ತು' ಎಂದು ಕರ್ಣನು ರವಿಗೆ ತಿಳಿಸಿದನು. ತಾಯಿ ಕುಂತಿಗೆ, ತಾಯೇ "ನೀವು ನನ್ನನ್ನು ಮಗನೆಂದುದರಿಂದ ನನ್ನ ಛಲ, ಚಾಗ, ಆಳವು. ಕಲಿತನ, ಕುಲ–ಎನ್ನ ಮೆಯ್ಯೊಳು ನೆಲಸಿದವು. ನೀವ್ ಎಡೆಮಡಗರೆ ಬೆಸಪ ತೋಳ್ತುವೆಸನಂ ಬೆಸಸಿಂ"–ಎನ್ನಲು ಕೊಂತಿ, 'ನೀನುಮಿತ್ತೆ, ಆನುಂ ಪೆತ್ತೆ; ನಂಬಿದ ನಿನ್ನನುಜರ್ ನಿನ್ನಂ ಬೆಸಕೆಯೆ, ನೀನೆ ನೆಲವಾಳ್ವುದು ಕಂದಾ –ಎಂದುದಕ್ಕೆ ಕರ್ಣನು :

"ಮೀಂಗುಲಿಗನಾಗಿಯುಮವ್ ಆಣಂ ಆಂ ಗುಣಮನೆ
ಬಿಸುಟೆನಿಲ್ಲ;
ನಿಮಗಂ ಮಗನಾದಂಗೆನಗೆ ಬಿಸುಡಲಕ್ಕುಮೇ?
ನೀಂ ಗಳ ಮಂಬಲನೆ ಬಿಸುಡಿಂ ಇನ್ ಎನ್ನೆಡೆಯೊಳ್"

ಓಗೆಂದೊಡನೆ ಕುಂತಿ ದುಃಖದಿಂ ಅತ್ತುಬಿಟ್ಟಳು. ಆದಕ್ಕೆ ಕರ್ಣನು, ತಾಯೆ ನಿನ್ನ ಚಿಂತೆಗೆ ಕಾರಣವೇನು ? "ಪಡಿಯೆಂ

ಪುರಿಗಣೆಯುಂ: ನರನನ್ನು ಒಳಗೊಂಡು ನಿನ್ನ ಮಕ್ಕಳನ್ನು ಸಾಯಿಸೆನು: ಎನ್ನನೆ ರಣದೊಳ್ ಅಳಿವೆಂ: ಇಂದೆ ಅಡಿಯಿತ್ತೆಂ" ಎಂದು ಹೇಳಿ. ಕೊಂತಿಯನ್ನು ಕಳಿಸಿದನು.

ಶ್ರೀಕೃಷ್ಣನು ವಿರಾಟಪುರಕ್ಕೆ ಬಂದು ಹಸ್ತಿನಾವತಿಯಲ್ಲಿ ನಡೆದುದೆಲ್ಲವನ್ನೂ ವಿವರಿಸಿದನು. ಹಸ್ತಿನಾವತಿಯಿಂದ ದುರ್ಯೋಧನನಟ್ಟಿದ ದೂತ ಸಂಜಯನು ಬಂದು ಪಾಂಡವರಿಗೆ, ದುರ್ಯೋಧನನು ಯುದ್ಧದಲ್ಲಲ್ಲದೆ ಭೂಮಿಯನ್ನು ಕೊಡುವುದಿಲ್ಲ ಎಂಬುದನ್ನು ತಿಳಿಸಿ, ಕುರುಕ್ಷೇತ್ರವೇ ರಣಭೂಮಿಯೆಂದೂ ತಿಳಿಸಿದ್ದಾನೆಂದನು. ಅದನ್ನು ಒಪ್ಪಿದ ಧರ್ಮರಾಜ–ಭೀಮಸೇನರು ಯುದ್ಧವನ್ನು ಸ್ವೀಕರಿಸಿದರೆಂದು ಸಂಜಯನಿಗೆ ತಿಳಿಸಿ ಕುರುಕ್ಷೇತ್ರದತ್ತ ಸೈನ್ಯಕ್ಕೆ ಹೊರಡಲು ಪ್ರಯಾಣಭೇರಿ ಹೊಯ್ಸಿದರು:

೫. ಪಂಪಭಾರತ-ಕುಮಾರವ್ಯಾಸ ಭಾರತಗಳ ಈ ಕಥಾಸನ್ನಿವೇಶದ ವ್ಯತ್ಯಾಸಗಳು

ಪಂಪಭಾರತದಲ್ಲಿ ಈ ಕಥೆ ಸಂಗ್ರಹವಾಗಿದೆ. ಕುಮಾರವ್ಯಾಸ ಭಾರತದಲ್ಲಿ ಎಲ್ಲ ಪ್ರಸಂಗಗಳೂ ವಿಸ್ತೃತವಾಗಿ ಬಂದಂತೆ ಈ ಪ್ರಸಂಗವೂ ವಿಸ್ತೃತವಾಗಿದೆ. ಪಂಪಭಾರತ 'ಲೌಕಿಕ' ಕಾವ್ಯ ವಾದುದರಿಂದ ಅಲ್ಲಿ ಭಕ್ತಿಗೆ, ಧರ್ಮಕ್ಕೆ ಹೆಚ್ಚಿನ ಅವಕಾಶವಿಲ್ಲ. ಅದಕ್ಕನುಗುಣವಾಗಿ ಪಂಪನಲ್ಲಿ ಕಥೆ ಮುಂದುವರಿದಿದೆ. ಕಥೆಯು ಒಟ್ಟು ಚೌಕಟ್ಟು ಕುಮಾರವ್ಯಾಸನಲ್ಲಿ ಪಂಪನನ್ನು ಅನುಸರಿಸಿಯೇ ಮುಂದುವರೆಯುತ್ತದೆ. ಈ ಕೆಳಗಿನ ಕೆಲವು ಪ್ರಸಂಗಗಳು ಪಂಪಭಾರತದಲ್ಲಿಲ್ಲ.

೧. ದ್ರುಪದನ ಪುರೋಹಿತನು ಕೌರವನ ಆಸ್ಥಾನಕ್ಕೆ ಹೋದ ಬಗ್ಗೆ ಕುಮಾರವ್ಯಾಸ ಹೇಳಿದ್ದಾನೆ. ಆದರೆ ಬುದ್ಧಿವಂತ ರೊಬ್ಬರನ್ನು ಮೊದಲು ಕೌರವನ ಆಸ್ಥಾನಕ್ಕೆ ಕಳಿಸುವುದು ಎಂಬುದರಿಂದ ಸೂಚಿತವಾಗಿದೆ ಪಂಪನಲ್ಲಿ.

೨. ಕುಮಾರವ್ಯಾಸನಲ್ಲಿ ಕೃಷ್ಣನು ಸಂಧಾನಕ್ಕೆ ಹೋಗುವ ಪೂರ್ವದಲ್ಲಿ ಐವರು ಪಾಂಡವರನ್ನೂ ಪ್ರತ್ಯೇಕವಾಗಿ ಅಭಿಪ್ರಾಯ ಕೇಳುತ್ತಾನೆ. ಅದರಲ್ಲಿ ಮೊದಲು ಧರ್ಮ, ಭೀಮ, ಅರ್ಜುನ, ನಕುಲರು ಸಭೆಗೆ ಒಡಂಬಟ್ಟಿರುತ್ತಾರೆ. ಸಹದೇವನೊಬ್ಬನೇ

ಯುದ್ಧಕ್ಕೆ ಅಣಿಯಾಗುತ್ತಾನೆ. ಕೊನೆಗೆ, ಕೃಷ್ಣನು ದ್ರೌಪದಿಯನ್ನು ಕರೆದು, ಆಕೆಯ ಅಭಿಮತವನ್ನು ಕೇಳುತ್ತಾನೆ. ಆಕೆ ಬಂದು ಭೀಮನನ್ನು ಮೂದಲಿಸಿ, ತಾನು ತನ್ನೈವರು ಪುತ್ರರು ಸಹದೇವ, ಘಟೋತ್ಕಜರನ್ನೊಡಗೂಡಿ ಯುದ್ಧವನ್ನೇ ಮಾಡುವುದಾಗಿ ಹೇಳುತ್ತಾಳೆ. ನಂತರ ಭೀಮನೂ ಯುದ್ಧಕ್ಕೆ ಒಪ್ಪುತ್ತಾನೆ. ಕೃಷ್ಣನಿಗೂ ಸಂಧಾನ ಬೇಕಿರಲಿಲ್ಲ ಎಂಬುದು ಕುಮಾರವ್ಯಾಸನಲ್ಲಿ ಸ್ಪಷ್ಟವಿದ್ದರೆ ಈ ಎಲ್ಲ ವಿವರಗಳು ಪಂಪಭಾರತದಲ್ಲಿಲ್ಲ.

೩. ಪಂಪಭಾರತದಲ್ಲಿ ಧರ್ಮರಾಜನೇ ತಮ್ಮ ಮುಂದಿನ ರಾಜಕೀಯ ಭವಿಷ್ಯಕ್ಕೆ ಪ್ರಸ್ತಾಪ ಹಾಕುತ್ತಾನೆ. ಕುಮಾರವ್ಯಾಸನಲ್ಲಿ ಕೃಷ್ಣನೇ ಇದಕ್ಕೆ ಪ್ರಚೋದನೆ ನೀಡುತ್ತಾನೆ. ಕುಮಾರವ್ಯಾಸನಲ್ಲಿ ಕೃಷ್ಣನಿಗೆ ಹೆಚ್ಚಿನ ಸ್ಥಾನಮಾನಗಳಿವೆ; ಪಂಪನಲ್ಲೂ ಕೃಷ್ಣನ ಪಾತ್ರ ಈ ಪ್ರಸಂಗದಲ್ಲಿ ಎದ್ದು ಕಾಣುತ್ತದೆಯಾದರೂ ಕುಮಾರವ್ಯಾಸನಲ್ಲಿರುವಷ್ಟು ಎದ್ದು ಕಾಣದು.

೪. ಕೃಷ್ಣನು ವಿದುರನ ಮನೆಯಲ್ಲಿ ಒಕ್ಕುಡಿತೆ ಹಾಲಿನಿಂದ ಹಸಿವ ನೂಕಿದಾಗ ಹಸ್ತಿನಾಪತಿಯಲ್ಲಿ ಎಲ್ಲರ ಮನೆಗಳಲ್ಲೂ ಹಾಲಿನ ಹಳ್ಳ ಹರಿಯುತ್ತದೆ! ಈ ಅದ್ಭುತ ಕೃಷ್ಣಮಹಿಮೆ ಪಂಪನಲ್ಲಿಲ್ಲ.

೫. ಕೃಷ್ಣನು ಸಂಧಾನಕ್ಕೆ ಹೊರಟಾಗ ಮತ್ತು ಅರ್ಜುನನು ದ್ವಾರಕಾವತಿಗೆ ಕೃಷ್ಣನನ್ನು ತಮ್ಮತ್ತ ಒಲಿಸಿಕೊಳ್ಳಲು ಹೋದಾಗ ಕಂಡುಬಂದ ಶುಭಸೂಚನೆಗಳಾವವನ್ನೂ ಪಂಪನು ಹೇಳಿಲ್ಲ.

೬. ಕೃಷ್ಣನು ಸಂಧಾನಕ್ಕೆ ಹೋದಾಗ, ರಾಜಸಭೆಯಲ್ಲಿದ್ದವರು ಎಲ್ಲರೂ ಎದ್ದು ನಿಂತು ಕೃಷ್ಣನು 'ಲೋಕಗುರು' ಎಂದು ತಲೆಬಾಗಿದರು. ಕುಮಾರವ್ಯಾಸನಲ್ಲಿ ದುರ್ಯೋಧನನೊಬ್ಬನನ್ನುಳಿದು ಎಲ್ಲರೂ ಎದ್ದು ನಿಂತರು. ದುರ್ಯೋಧನ ನೇಕ್ಷ ಮದಕ್ಕೆ ಕೃಷ್ಣನು ಕುಪಿತನಾಗಿ ಭೂಮಿಯನ್ನೇ ತನ್ನುಂಗುಟದಿಂದೊತ್ತಿದಾಗ ದುರ್ಯೋಧನನು ಕುಳಿತ ಸಿಂಹಾಸನದ ಗೊಣಸು ಮುರಿದು, ಕೃಷ್ಣನ ಪಾದದಡಿಯಲ್ಲಿ ಅವನು ಬೀಳುತ್ತಾನೆಂದು ವರ್ಣಿತವಾದರೆ ಪಂಪನಲ್ಲಿ ಗೊಣಸು ಮುರಿದುದಿಲ್ಲ.

೭. ಕೃಷ್ಣನ ಲೋಕ ಗುರುತ್ವವನ್ನೂ, ಅವನೇ ಹುಟ್ಟಿಸುವ ಸಾಯಿಸುವ, ಶಕ್ತಿ ಎಂಬುದನ್ನು ಪಂಪ ದುರ್ಯೋಧನನ ಬಾಯಿಂದ ಆಡಿಸಿಲ್ಲವಾದರೂ ಇತರರೆಲ್ಲ ಕೃಷ್ಣನ ಆಧಿಕ್ಯವನ್ನು ತಿಳಿದಿದ್ದರೆಂಬುದನ್ನು ಪಂಪನ ಇತರ ಹಿರಿಯ ವ್ಯಕ್ತಿಗಳಾದ ಧರ್ಮ, ಭೀಷ್ಮಾದಿಗಳು ಪ್ರಕಟಪಡಿಸುತ್ತಾರೆ. ಆದರೆ ಕುಮಾರವ್ಯಾಸನ ದುರ್ಯೋಧನನಿಗೆ ಕೃಷ್ಣ ದೇವನೆಂಬುದೂ ತಿಳಿದಿತ್ತು.

೮. ಕುಮಾರವ್ಯಾಸನಲ್ಲಿ ವಿದುರನ ಪ್ರಸಂಗ ಅತ್ಯಂತ ವಿಸ್ತಾರವಾಗಿದ್ದು ಅದು ಔಚಿತ್ಯಪೂರ್ಣವಾಗಿದೆ. ಅವನನ್ನು ದುರ್ಯೋಧನನು 'ತೊತ್ತಿನಮಗ' ಎಂದು ನಿಂದಿಸಿದ್ದರೂ ಅವನು ಮಹಾಶೂರನೂ, ಸ್ವಾಮಿನಿಷ್ಠನೂ, ನೀತಿಶಾಸ್ತ್ರವಿಶಾರದನೂ ಆಗಿ, ಧೃತರಾಷ್ಟ್ರನಿಗೆ ಅತ್ಯಂತ ಆಪ್ತನಾಗಿದ್ದವನು. ಅವನು ಶೂದ್ರನಾಗಿದ್ದರೂ ಅವನ ವ್ಯಕ್ತಿತ್ವವನ್ನು ಕುಮಾರವ್ಯಾಸನು ವಿಸ್ತರಿಸಿರುವುದು ಅತ್ಯಂತ ಗಮನಾರ್ಹವಾಗಿದೆ.

೯. ಧೃತರಾಷ್ಟ್ರನಿಗೆ ಸನತ್ಕುಮಾರಮುನಿ ಉಪದೇಶಿಸಿದ ಭಾಗವು ಪಂಪಭಾರತದಲ್ಲಿಲ್ಲ. ಧೃತರಾಷ್ಟ್ರನು ಕೃಷ್ಣ, ಪಾಂಡವರ ಬಗೆಗೆ ತಳೆದ ಪ್ರೀತಿ. ಗೌರವಗಳು ಕುಮಾರವ್ಯಾಸನಲ್ಲಿ ಬಹು ಚೆನ್ನಾಗಿ ಮೂಡಿವೆ.

೧೦. ಪಂಪನೂ ಒಂದು ಸಂಧಿಯಲ್ಲಿ ವಿವರಿಸಿದ ಕಥೆ ಕುಮಾರವ್ಯಾಸನಲ್ಲಿ ಬಹು ವಿಸ್ತಾರವಾಗಿ ಒಂದು ಪರ್ವವಾಗಿರುವುದರಿಂದ ಅದು ವ್ಯಾಸರ ಭಾರತಕ್ಕೆ ಹೆಚ್ಚು ನಿಷ್ಠವಾಗಿದೆ; ಆದರಿಂದ ಪ್ರತಿಯೊಬ್ಬ ವ್ಯಕ್ತಿಯ ಮನೋಧರ್ಮವನ್ನು ತಿಳಿಯಲು ಅತ್ಯಂತ ಸಹಾಯಕಾರಿಯಾಗಿದೆ.

೬. ಕೃಷ್ಣಸಂಧಾನದ ಮುಖ್ಯ ವಿಷಯ

ರಾಜನೀತಿ

ಕುಮಾರವ್ಯಾಸ ಉದ್ಯೋಗಪರ್ವದ ಮುಖ್ಯವಿಷಯವೇ 'ರಾಜನೀತಿ ವ್ಯವಹಾರ' ಎಂಬುದು ಸುಸ್ಪಷ್ಟ. ಅಲ್ಲಲ್ಲಿ ನೀತಿ-ಭಕ್ತಿ ಪ್ರತಿಪಾದಿತವಾಗಿದ್ದರೂ ಅವು ಮೂಲಕಥೆಗೆ ಪೋಷಕವಾಗಿವೆ. ಈ ಭಾಗದ ಮುಖ್ಯ ವ್ಯಕ್ತಿಯೇ ಶ್ರೀಕೃಷ್ಣ. ಅವನು ಪಾಂಡವ ಪಕ್ಷಪಾತಿ, ಸತ್ಯಪಕ್ಷಪಾತಿ; ಅವನು ದೈವಪುರುಷ. ಅವನಿಲ್ಲಿ ಪ್ರಧಾನಪಾತ್ರ. ಸತ್ಯವಂತರ ರಾಜಕೀಯವನ್ನೇ ಪ್ರತಿಪಾದಿಸುತ್ತಾನೆ. ಅವನೊಬ್ಬ 'ಚತುರ ರಾಜಕಾರಣಿ—ಮಹಾ ಮೇಧಾವಿ, ಅವನು ವೈರಿಬಲವನ್ನು ಛಿದ್ರಿಸುವಲ್ಲಿ ಪ್ರಯೋಗಿಸಿದ ನಾನಾ ತಂತ್ರಗಳೂ ಅನುಕರಣೀಯವಾಗಿವೆ. ಅವನು ಮಾತನಾಡುವ ರೀತಿ, ವಿಶಿಷ್ಟ ಬಗೆಯದು. ಹೊತ್ತುಬಂದಾಗ, ಯಾರನ್ನು ಹೇಗೆ, ತನ್ನತ್ತ ಒಲಿಸಿಕೊಳ್ಳಬೇಕೆಂಬುದನ್ನು ಬಲ್ಲ ಚತುರ. ಮಾತು ಬಳಸುವಾಗ ಮಾತು, ಶಕ್ತಿ ಬಳಸುವಾಗ ಶಕ್ತಿ ಬಳಸಿ, ಇದಾವುದೂ ನಡೆಯದಿದ್ದಾಗ ತನ್ನ ದೇವತ್ವವನ್ನು ಪ್ರಕಟಮಾಡಿದ್ದಾನೆ. ಸಾಮೋಪಾಯ, ಭೇದೋಪಾಯ, ದಾನೋಪಾಯ ಎಲ್ಲವನ್ನೂ ಪ್ರಯೋಗಿಸಿ. ಕೊನೆಗೆ ದಂಡೋಪಾಯವನ್ನೂ ಪ್ರಯೋಗಿಸುತ್ತಾನೆ. ಪಾಂಡವರ ಸಭೆಗೆ ಸಂಜಯನು ಕೌರವರ

ದೌತ್ಯವನ್ನು ವಹಿಸಿಬಂದಾಗ, ಅವನಿಗೆ ಸವಿಮಾತು ಆಡಿ. ಸವಿಯೂಟ ನೀಡಿ, ಉಚಿತ ಕಾಣಿಕೆ ನೀಡಿ, ಪಾಂಡವಪಕ್ಷದತ್ತ ಒಲಿಸಿಕೊಳ್ಳುತ್ತಾನೆ. ತಾನು ಪ್ರತ್ಯೇಕವಾಗಿ ಕರೆದು ಮಾತನಾಡುತ್ತಾನೆ: ಪಾಂಡವರ ಬಗೆಗೆ ಗೌರವಾದರ ಉಂಟುಮಾಡುವಂತೆ ನಯವಾಗಿ ಮಾತನಾಡುತ್ತಾನೆ. ಆದುದರಿಂದ ಸಂಜಯನು ಮರಳಿ ಹೋಗಿ ಕೌರವನ ಸಭೆಗೆ ವರದಿಮಾಡುವಾಗ ಪಾಂಡವರನ್ನು ಹೊಗಳಿ ಮಾತನಾಡುತ್ತಾನೆ. ಕುಪಿತನಾದ ಕೌರವನು ಆ ಕಾರಣ ಅವನನ್ನು "ಭಂಡ" ಎಂದು ಬೈದು. "ನೂಕಾಚೆ" ಎಂದು ಕೂಗಾಡಿದನು ! ಹಿರಿಯನೂ ಆಪ್ತಸಚಿವನೂ ಆದ ಸಂಜಯನು ಈ ಕಾರಣದಿಂದ, ಯುದ್ಧದ ಪೂರ್ವದಲ್ಲಿಯೇ ಒಳಗೊಳಗೇ ಕೌರವರ ಬಗೆಗೆ ಪ್ರೀತಿ. ವಿಶ್ವಾಸ ಕಳೆದುಕೊಳ್ಳುವಂತಾಯಿತು.

ಶ್ರೀಕೃಷ್ಣನು ಸಂಧಾನಕ್ಕೆ ತಾನೇ ಹೋಗುವ ಬದಲು ದ್ರುಪದನ ಪುರೋಹಿತನನ್ನು ಕಳುಹಿಸಿದುದು ಬಹು ಉಚಿತವಾದುದು. "ಶಿಷ್ಟರನು ಕಳುಹುವುದು". ಭೀಷ್ಮಾದಿಗಳ ಬಳಿಗೆ ಎಂದು ಹೇಳಿದುದು ಶ್ಲಾಘನೀಯ. ಸಂಧಾನದ ಮಾತುಗಳು ನಡೆಯುತ್ತಿದ್ದಂತೆಯೇ ಯುದ್ಧದ ಸಿದ್ಧತೆಗಳೂ ನಡೆದೇ ಇದ್ದುವು. ಸ್ನೇಹಿತರಿಗೆ ಸೈನ್ಯಸಮೇತ. ಸಹಾಯಕ್ಕೆ ಬರಲು ಧರ್ಮರಾಜನಿಂದ ಪತ್ರಬರೆಯಿಸಿದವನೂ ಶ್ರೀಕೃಷ್ಣನೇ. ಈ ಪತ್ರವನ್ನು ನೋಡಿಯೇ ಶಲ್ಯಭೂಪನು ಪಾಂಡವರ ಕಡೆಗೆ ಅವರ ಸಹಾಯಕ್ಕೆ ಹೊರಡುತ್ತಾನೆ. ಪತ್ರ ಬರೆಯದಿದ್ದರೆ ಶಲ್ಯಭೂಪನು ಬಂಧುಗಳಾದ ಪಾಂಡವರತ್ತ ಹೋಗಿಬರುತ್ತಲೇ ಇರಲಿಲ್ಲ. ಪಾಂಡವರ ಸರ್ವಕಾರ್ಯಗಳಿಗೂ ಶ್ರೀಕೃಷ್ಣ ಪ್ರೇರಕ, ಪ್ರಚೋದಕ, ಸಹಾಯಕ.

ಆದುದರಿಂದಲೇ ಕೌರವನು ಶ್ರೀಕೃಷ್ಣನನ್ನು "ಪಾಂಡವ ಪಕ್ಷಪಾತಿ", "ಕೈತವದ ಶಿಕ್ಷಾಗುರು" ಎಂದು ಕರೆದಿದ್ದಾನೆ. ಕುಮಾರವ್ಯಾಸನ ಕೃಷ್ಣ ಮಹಾತಂತ್ರಜ್ಞ. ತನ್ನ ಅಣ್ಣ ಬಲರಾಮನು (ದುರ್ಯೋಧನ) ಕೌರವನತ್ತ ಇದ್ದುದನ್ನು ತಿಳಿದು ಬಹು ಮುಖ್ಯ ಪ್ರಸಂಗದಲ್ಲಿ ಬಲರಾಮ, ಶಲ್ಯಭೂಪ ಇವರ ನೆರವು ದುರ್ಯೋಧನನಿಗೆ ಸಿಗದಂತೆ ವ್ಯವಸ್ಥೆ ಮಾಡುತ್ತಾನೆ.

ಸಂಧಾನಕ್ಕೆ ಬಂದ ಶ್ರೀಕೃಷ್ಣ, ವಿದುರನ ಮನೆಯಲ್ಲಿ ಇಳಿದು ಕೊಂಡು ದಂತೂ ಅವನ ರಾಜಕೀಯ ಪ್ರಜ್ಞೆ, ಹಾಗೂ ಜಾಣ್ಮೆ ಗಳನ್ನೇ ಎತ್ತಿ ತೋರಿಸುತ್ತದೆ. ಆದ್ದರಿಂದ ದುರ್ಯೋಧನನ ಕೋಪವು ನೆತ್ತಿಗೇರಿತು. ತುಂಬಿದ ರಾಜಸಭೆಯಲ್ಲಿ ಅವನು ಶ್ರೀಕೃಷ್ಣ ಹಾಗೂ ವಿದುರ ಇಬ್ಬರನ್ನೂ ನಿಂದಿಸಿದುದು ಈ ಕಾರಣಕ್ಕಾಗಿಯೇ. ಬಹಿ ರಂಗವಾಗಿಯೇ ಶ್ರೀಕೃಷ್ಣನು ದುರ್ಯೋಧನನಿಗೆ :

"ಕೌರವರರಾಯ, ಪ್ರಿಯನು ನೀನೆಮಗಲ್ಲ;
ನಿನ್ನಾಲಯದೊಳು ಎಮಗೆ ಊಟ ಎಂತು
ಸಂಭವಿಸುವುದು?
ಹಗೆಯನುಣಿಸುವುದಾಗದೈ; ವೈರಿಗಳ ನಿಳಯದೊಳು
ಅನ್ನಪಾನಾದಿಗಳ ಕೊಳಲಾಗದು; ನಿಧಾನಿಸೆ
ರಾಜನೀತಿಯಿದು;
ಬಗೆಯೆ ನೀ ಪಾಂಡವರಿಗಹಿತನು; ವಿಗಡ ಪಾಂಡವ
ರೆನ್ನ ಜೀವನ;
ಹಗೆಯ ನಂಬುವುದೆಂತು ಹೇಳೈ ಕೌರವರರಾಯ"

ಎಂದೆನ್ನುತ್ತಾನೆ. ಸಭೆಯಲ್ಲಿ ಶ್ರೀಕೃಷ್ಣನನ್ನು ಕಟ್ಟಿದುದು ಅಲ್ಲಿಯ ಅನೇಕರಿಗೆ ಕೋಪವನ್ನುಂಟುಮಾಡಿತು. ಭೀಷ್ಮ, ದ್ರೋಣಾದಿಗಳಲ್ಲಿ ಪಾಂಡವರ ಬಗೆಗೆ ಅಧಿಕ ಮಮತೆಯನ್ನೇ ಹುಟ್ಟಿಸಿತು.

ಸಂಧಾನದ ಮಾತುಕತೆ ವಿಫಲಗೊಂಡನಂತರ ಕರ್ಣನ ಬಳಿಗೆ ಬಂದು ಏಕಾಂತದಲ್ಲಿ ಕಂಡು, ಅವನನ್ನು ತನ್ನ ರಥದಲ್ಲಿ ಕುಳ್ಳಿರಿಸಿಕೊಂಡು, ಬಾಯ್ದಂಬುಲವನ್ನಿತ್ತು, ನಯದಿಂದ ಮಾತುನಾಡಿ, ಅವನ ಜನ್ಮರಹಸ್ಯವನ್ನು ತಿಳಿಸಿದುದಲ್ಲದೆ ಮತ್ತೆ ಕುಂತೀದೇವಿಯನ್ನು ಕಳಿಸಿದುದೂ ದುರ್ಯೋಧನನ ಬಲದ ಬೆನ್ನೆಲುಬನ್ನೇ ಮುರಿದುದು ಶ್ರೀಕೃಷ್ಣನ ಭೇದೋಪಾಯದ ತುತ್ತತುದಿ. ಎನ್ನಬಹುದು. ಹೀಗಾಗಿ ಅವನ ರಾಜಕಾರಣಪಟುತ್ವವು ಈ ಪರ್ವದಲ್ಲಿ ಅತ್ಯಂತ ಹದಗೊಂಡು ನಿರೂಪಿತವಾಗಿರುವುದನ್ನು ನಾವು ಕಾಣುತ್ತೇವೆ. ಈ ಭಾಗದಲ್ಲಿ ಕೃಷ್ಣನೇ ಪ್ರಧಾನವ್ಯಕ್ತಿಯಾಗಿದ್ದು, ಅವನ ರಾಜಕಾರಣಪಟುತ್ವ, ಬುದ್ಧಿವಂತಿಕೆ ಮೊದಲಾದವು ರಾಜನೀತಿ ನಿಪುಣರು ಅನುಸರಿಸಲು ಯೋಗ್ಯವಾಗಿವೆ.

— — *** — —

ಉಪನ್ಯಾಸ ಗ್ರಂಥಮಾಲೆಯ ಕೆಲವು ಪ್ರಕಟನೆಗಳು

೧ ವೀರರಾಣಿ ಬೆಳವಡಿ ಮಲ್ಲಮ್ಮಾ

—ಜೆ. ಜಿ. ಕಾಡದೇವರ

೨ ಲಕ್ಕಣ್ಣದಂಡೇಶ

—ವ್ಹಿ. ಶಿವಾನಂದ

೩ ಢಕ್ಕೆಯ ಬೊಮ್ಮಣ್ಣ

—ಎಚ್. ಎಸ್. ಮುಕ್ತಾಯಕ್ಕ

೪ ಮೈಲಾರ ಬಸವಲಿಂಗ ಶರಣರು

—ದೇವೇಂದ್ರಕುಮಾರ ಹಕಾರಿ

೫ ಅಕ್ಕಮಹಾದೇವಿ ಮತ್ತು ಮೀರಾಬಾಯಿ

—ಎಸ್. ಎಸ್. ಕಬ್ಬಿನ

೬ ಮೈಲಾರ ದೇವರು

—ಶ್ರೀನಿವಾಸ ರಿತ್ತಿ

೭ ಗಜೇಶ ಮಸಣಯ್ಯ

—ಎಸ್. ಎಸ್. ಭೂಸರಡ್ಡಿ

೮ ಬತ್ತಲೇಶ್ವರ ರಾಮಾಯಣ

—ಎಲ್. ಆರ್. ಹೆಗಡೆ

೯ ನಾಲತ್ತವಾಡದ ವೀರೇಶ ಶರಣರು

—ಬಿ. ವ್ಹಿ. ಹಂಪನಗೌಡ್ರ

೧೦ ಮಹಾರಾಣಿ ಕಿತ್ತೂರ ಚೆನ್ನಮ್ಮನವರು

— ವ್ಹಿ. ಜಿ. ಮಾರೀಹಾಳ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ